ಪಾವಂಜೆ ಗೋಪಾಲಕೃಷ್ಣಯ್ಯ

PAVANJE GOPALAKRISHNAIAH.



ಕರ್ನಾಟಕ ಲಲಿತಕಲಾ ಅಕಾಡೆಮಿ
KARNATAKA LALITHA KALA ACADEMY



ಬಾ.ನಾ. ಶಾಂತಪ್ರಿಯ.

ಬಾಳೆಕೊಪ್ಪ ನಾಗಭೂಷಣ ಶಾಂತಪ್ರಿಯರವರು ಚಿಕ್ಕ ಮಗಳೂರು ಜಿಲ್ಲೆಯ ಜಯಪುರದಲ್ಲಿ ೧೯೬೬ ರಲ್ಲಿ ಜನಿಸಿದರು. ಮೆಕ್ಯಾನಿಕಲ್ ಇಂಜಿನಿಯರ್ ಪದವಿ ಹಾಗೂ ಎಂ. ಟೆಕ್. ಸ್ನಾತಕೋತ್ತರ ಪಧವಿದರರಲ್ಲದೆ ಪತ್ರಿಕೋದ್ಯಮದಲ್ಲಿ ಡಿಪ್ಲೊಮಾ ಪಡೆದಿದ್ದಾರೆ. ಚಿತ್ರಕಲೆ, ಸಣ್ಣಕತೆ, ಕವನ, ನಾಟಕ ಪತ್ರಿಕೋದ್ಯಮದಲ್ಲಿ ವಿಶೇಷ ಆಸಕ್ತಿ. ಛಾಯಾಗ್ರಹಣ ಹಾಗೂ ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುವುದು ಮುಖ್ಯ ಹವ್ಯಾಸ. ಆಕಾಶವಾಣಿ ಹಾಗೂ ಅನೇಕ ದಿನಪತ್ರಿಕೆಗಳಲ್ಲಿ ಕಲೆ, ವಿಜ್ಞಾನಕ್ಕೆ ಸಂಬಂಧಪಟ್ಟಂತೆ ಅನೇಕ ಲೇಖನಗಳು ಮೂಡಿವೆ. ಉಡುಪಿಯ ಆರ್ಟಿಸ್ಟ್ ಪೋರಂನ ಸಂಸ್ಥಾಪಕ ಕಾರ್ಯದರ್ಶಿಯಾದ ಶ್ರೀಯುತರು ಸದ್ಯ ಮಣಿಪಾಲ್ ಇನಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಕರ್ನಾಟಕ ಕಲಾವಿದರ ಮಾಲೆ 33

ಪಾವಂಜೆ ಗೋಪಾಲಕೃಷ್ಣಯ್ಯ.

ಬಿ.ಎನ್.ಶಾಂತಪ್ರಿಯ.

ಕರ್ನಾಟಕ ಲಲಿತಕಲಾ ಅಕಾಡೆಮಿ

ನೃಪತುಂಗ ರಸ್ತೆ ಬೆಂಗಳೂರು

PAVANJE GOPALAKRISHNAIAH : A Biography by B.N.Shanthapriya, Published by K.Mukundan, Registrar, Karnataka Lalithakala Academy, Nrupatunga Road, Bangalore - 560 002.

First Impression, 1994.

Copies : 1000

ಬೆಲೆ : ರೂ. 10-00

Translated to English by : Ms. Manorama Hejmagdi.

ಪ್ರಧಾನ ಸಂಪಾದಕರು : ಶ್ರೀ.ಪಿ.ಆರ್.ತಿಪ್ಪೇಸ್ವಾಮಿ.

ಪ್ರಕಟಣಾ ಸಮಿತಿ: ಶ್ರೀ. ವಿ.ಟಿ.ಕಾಳೆ,
ಶ್ರೀಮತಿ .ಎಸ್.ಧನಲಕ್ಷ್ಮಿ,
ಡಾ.ಬಿ.ಕೆ.ಹಿರೇಮಠ
ಶ್ರೀ.ರಘುಪತಿಭಟ್,
ಶ್ರೀ.ವೈ.ಹೆಚ್.ಸೂಗೂರ್

ಮುದ್ರಣ : ಲಾವಣ್ಯ ಮುದ್ರಣ
ನಂ.19. ವಿದ್ಯಾಪೀಠ ಸರ್ಕಲ್,
ಬನಶಂಕರಿ 1ನೇ ಹಂತ,
ಬೆಂಗಳೂರು-560 050
ಫೋನ್ : 6610563

ಮೊದಲ ಮಾತು


ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರಮುಖ ಯೋಜನೆಗಳಲ್ಲಿ ರಾಜ್ಯದ ಹಿರಿಯ ಕಲಾವಿದರು ಮತ್ತು ಅವರ ಕೃತಿಗಳ ಬಗ್ಗೆ ಪುಸ್ತಕಗಳನ್ನು ಪ್ರಕಟಿಸಿರುವುದು ಒಂದು. ಈ ಪುಸ್ತಕಗಳು ಆ ಹೆಸರಾಂತ ಕಲಾವಿದರ, ಅವರ ಕಲೆಯ ಪರಿಚಯ ಮಾಡಿಸುವುದರ ಜೊತೆಗೆ ರಾಜ್ಯದಲ್ಲಿ ಕಲೆಯು ಬೆಳೆದು ಬಂದ ದಾರಿ ಮತ್ತು ಅವರ ಜೀವನ ಚರಿತ್ರೆಯ ತಿಳುವಳಿಕೆ ಉಂಟುಮಾಡಲು ಸಹಾಯವಾಗಬಲ್ಲದು.

ಈ ಯೋಜನೆಯಲ್ಲಿ ಈಗಾಗಲೇ ಸಚಿತ್ರ ಸುಂದರ ಹೊತ್ತಿಗೆಗಳು ಹೊರಬಂದಿದೆ. ಈಗ, ಅಂದರೆ 1994 - 95ರ ಸಾಲಿನಲ್ಲಿ ಹಲವಾರು ಹೊತ್ತಿಗೆಗಳು ಹೊರಬಂದಿದ್ದು, ಇನ್ನೂ ಒಂದೆರಡು ಸಿದ್ಧವಾಗುತ್ತಲಿವೆ. ಈಗ ಬಿಡುಗಡೆಯಾಗುತ್ತಿರುವ ಪುಸ್ತಕ ಹಿಂದಿನ ಮತ್ತು ಇಂದಿನ ಪೀಳಿಗೆಗೆ ಹಿರಿಯರಾದ ಪಾವಂಜೆ ಗೋಪಾಲಕೃಷ್ಣಯ್ಯ ಅವರನ್ನು ಕುರಿತದ್ದು. ಈ ಮಾಲೆ ಅತ್ಯಂತ ಜನಪ್ರಿಯವಾಗಿದ್ದು, ಈಗಾಗಲೇ ಕೆಲವು ಪುಸ್ತಕಗಳು ಪುನರ್ ಮುದ್ರಣವಾಗಿರುವುದು ಅವುಗಳ ಅವಶ್ಯಕತೆ, ಸಾರ್ಥಕತೆಗಳ ದ್ಯೋತಕ.

ಈ ಪುಸ್ತಕಗಳನ್ನು ರಚಿಸಲು ಆರಿಸಿರುವ ಬರಹಗಾರರು ಕಲೆಯ ವಿಷಯ ಮತ್ತು ಆಯಾ ಕಲಾವಿದರ, ಅವರ ಕಲಾ ವಿಲಾಸದ ಪ್ರತೀಕ. ಅವು ಆಯಾ ಕಲಾವಿದರ, ಅವರ ಕಾಲದ ಕಲಾ ಸಂಪತ್ತಿನ ವ್ಯಾಪ್ತಿಯನ್ನು ಅರಿಯಲು ಸಾಧಕವಾಗುವುದರಲ್ಲಿ ಸಂದೇಹವಿಲ್ಲ.

ಕಲಾವಿದರು, ಕಲಾರಸಿಕರು ಮತ್ತು ಸಾಹಿತ್ಯಾಭಿಮಾನಿಗಳು ಅಕಾಡೆಮಿಯ ಈ ಸಾಧನೆಯನ್ನು ಸ್ವಾಗತಿಸುವರೆಂದು ಆಶಿಸುತ್ತೇನೆ.

ಪಿ.ಆರ್. ತಿಪ್ಪೇಸ್ವಾಮಿ
ಅಧ್ಯಕ್ಷರು
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು.



ಪಾವಂಜೆ ಗೋಪಾಲಕೃಷ್ಣಯ್ಯ
PAVANJE GOPALAKRISHNAIAH

ಪಾವಂಜೆ ಗೋಪಾಲಕೃಷ್ಣಯ್ಯ

"ಪಾವಂಜೆ" ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯ ಒಂದು ಸಣ್ಣ ಗ್ರಾಮ. ಕಡಲ ತೀರದ ಹಸಿರು ಸಿರಿಯ ಮಡಿಲಿನ ಈ ಊರಿನಲ್ಲಿ ಶ್ರೀ ಶ್ರೀನಿವಾಸರಾವ್ ವೈದ್ಯ ವೃತ್ತಿಗೆ ಹೆಸರುವಾಸಿಯಾಗಿದ್ದರು. ವಿವಿಧ ರೋಗಿಗಳಿಗೆ ಗಿಡಮೂಲಿಕೆಯ ಔಷಧಿ ನೀಡುವುದು ಇವರ ಕುಲವೃತ್ತಿ. ಶ್ರೀ ಶ್ರೀನಿವಾಸ ರಾಯರಿಗೆ ಏಕೈಕ ಪುತ್ರ. ಅತ್ಯಂತ ಮೇಧಾವಿಯಾದ ಬಾಲಕನಿಗೆ ಚಿತ್ರಕಲೆಯು ಹವ್ಯಾಸವಾಗಿತ್ತು. ತಂದೆಗೆ ಮಗ ವೈದ್ಯ ಪಂಡಿತನಾಗಿ ಮನೆತನದ ವೃತ್ತಿಯ ಕಲಿಕೆಯಲ್ಲಿ ಆಸಕ್ತಿಯಿರಲಿಲ್ಲ. ಚಿತ್ರಕಲೆ ಅಭ್ಯಸಿಸಬೇಕೆಂಬ ಹಂಬಲ. ಈ ಬಗ್ಗೆ ತಂದೆಯ ಅಭ್ಯಂತರವಿರಲಿಲ್ಲ. "ತನಗಿಷ್ಟವಾದ ವಿಷಯ ಆರಿಸಿಕೊಳ್ಳಲಿ-ಅಭ್ಯಸಿಸಲಿ"ಎಂಬುದು ಅವರ ನಿಲುವು. ವೈದ್ಯ ವಿದ್ಯೆ ಕಲಿಸುವ ಪ್ರಯತ್ನ ಕೈ ಬಿಟ್ಟರು. ನಂತರ ವೈದ್ಯ ಪಂಡಿತನಾಗಬೇಕಿದ್ದ ಆ ಬಾಲಕ-(ವ್ಯಕ್ತಿ) ಕಲೆಯನ್ನು ಅಭ್ಯಸಿಸಿ, ಕಲಾಸಾಧನೆಗೈದು, ಕಲಾ ಪಂಡಿತರಾಗಿ ಕರ್ನಾಟಕದ ಕಲಾ ಕ್ಷೇತ್ರದಲ್ಲಿ ಗಣನೀಯವಾಗಿ ದುಡಿದು, ಕಲಾಶಿಕ್ಷಣ ಕ್ಷೇತ್ರಕ್ಕೆ ಬುನಾದಿ ಹಾಕಿ ಮಹಾನ್ ಕಲಾವಿದರಾಗಿ, ಕಲೆಗಾಗಿ ತಮ್ಮ ಜೀವ ಸವೆಸಿದ ಆ ಮಹಾನ್ ಕಲಾಪಂಡಿತ-ದಿವಂಗತ ಪಾವಂಜೆ ಗೋಪಾಲಕೃಷ್ಣಯ್ಯ. ಈ ಕಲಾವಿದರ ಕಾರ್ಯ ಅಗಾಧವಾದದು. ಇವರ ಹೆಸರು ಕಲಾ ಇತಿಹಾಸದಲ್ಲಿ ಮೆರೆಯಲಿಲ್ಲ. ಈಗಿನ ಹೆಚ್ಚಿನ ಜನರಿಗೆ ತಿಳಿವಿಲ್ಲ. ಇದಕ್ಕೆ ಮುಖ್ಯ ಕಾರಣ ಪ್ರಚಾರ ಪಡೆಯುವ ಉದ್ದೇಶವಿರಲಿಲ್ಲ. ಕೇವಲ ಕಲೋಪಾಸನೆಯೇ ಅವರ ಮುಖ್ಯ ಗುರಿಯಾಗಿತ್ತು.

ಬಾಲ್ಯ - ಶಿಕ್ಷಣ

ಪಾವಂಜೆ ಗೋಪಾಲಕೃಷ್ಣಯ್ಯ ಅವರು ಹುಟ್ಟಿದ್ದು 'ಪಾವಂಜೆ'ಗ್ರಾಮದಲ್ಲಿ (ಕ್ರಿ.ಶ.೧೮೬೬). ತಾಯಿ ನಾಗಮ್ಮ, ತಂದೆ ಶ್ರೀ ಶ್ರೀನಿವಾಸರಾವ್. ದಕ್ಷ ವೈದ್ಯಕೀಯ ವೃತ್ತಿಗೆ ಹೆಸರುವಾಸಿ. ತಮ್ಮ ನಡೆ-ನುಡಿಯಿಂದ ಪಾವಂಜೆ ಊರಿನ ಸುತ್ತಮುತ್ತಲಿನ ಜನರಲ್ಲಿ ಅತ್ಯಂತ ಗೌರವ-ನಂಬಿಕೆಗೆ ಪಾತ್ರರಾಗಿದ್ದರು. ಪುತ್ರ ಗೋಪಾಲಕೃಷ್ಣಯ್ಯ ಅವರಿಗೆ ಬಾಲ್ಯದಲ್ಲಿಯೇ ಕಲೆಯ ಬಗ್ಗೆ ಆಸಕ್ತಿ. ಕಲೆಯನ್ನೇ ಅಭ್ಯಸಿಸಬೇಕೆಂಬ ಹಂಬಲ ಹೊಂದಿದ್ದ ಬಾಲಕ ಗೋಪಾಲಕೃಷ್ಣಯ್ಯರಿಗೆ ಕಂಡ ದೃಶ್ಯಗಳನ್ನು ಚಿತ್ರಿಸುವುದು ಅತ್ಯಂತ ನೆಚ್ಚಿನ ಹವ್ಯಾಸವಾಗಿತ್ತು. ಗ್ರಾಮಾಂತರ ಪ್ರದೇಶದಲ್ಲಿದ್ದ ಗೋಪಾಲಕೃಷ್ಣಯ್ಯ ಅವರಿಗೆ ಕಲೆಯ ಬೆಳವಣಿಗೆಗೆ ಅಗತ್ಯವಾಗಿದ್ದ ಮಾರ್ಗದರ್ಶನ ಲಭ್ಯವಿರಲಿಲ್ಲ. ಆದರೆ ಮನೆಯಲ್ಲಿ ಚಿತ್ರಕಲಿಕೆಗೆ ಅಭ್ಯಂತರವಿರಲಿಲ್ಲ. ಬಾಲಕ ಪಾವಂಜೆಯವರಿಗೆ ವಿದ್ಯೆ ಕಲಿಕೆಯಲ್ಲಿ ಅತೀವ ಉತ್ಸಾಹ. 'ಪಾವಂಜೆ'ಯಿಂದ ಮಂಗಳೂರಿಗೆ ವಿದ್ಯೆ ಕಲಿಕೆಗಾಗಿ ಬಂದರು. ಬಾಸಲ್ ಮಿಷನ್ ಶಾಲೆಯಲ್ಲಿ ಇವರ ಶಿಕ್ಷಣ ಆರಂಭ. ನಂತರ ಮಂಗಳೂರಿನ ಸರ್ಕಾರಿ ಕಾಲೇಜಿನಲ್ಲಿ ಕಲಿಕೆ ಮುಂದರಿಕೆ. ಪ್ರಾಥಮಿಕ ಹಂತದಲ್ಲಿ ಚಿತ್ರಕಲೆಗೆ ಅವಕಾಶವಿರಲಿಲ್ಲ. ಇವರು ಮಂಗಳೂರಿನ ಸರ್ಕಾರಿ ಕಾಲೇಜಿನಲ್ಲಿ ಎಫ್.ಎ.ತರಗತಿಯಲ್ಲಿ ಓದುತ್ತಿದ್ದಾಗ ನಡೆದ ಘಟನೆ ಅವರಲ್ಲಿ ಅಡಗಿದ್ದ ಕಲಾ ಪ್ರತಿಭೆ ಮೊಳಕೆ ಒಡೆದು, ಚಿಗುರಿ-ಗಿಡವಾಗಿ, ಹೆಮ್ಮರವಾಗಿ ಬೆಳೆಯಲು ಅವಕಾಶ ದೊರೆಯಿತು.

ಆಗಿನ ಕಾಲದಲ್ಲಿ ಸರ್ಕಾರದ ಕಾಲೇಜಿನಲ್ಲಿ ಶಿಕ್ಷಕರ ಹುದ್ದೆ ಬ್ರಿಟನ್

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಪದವಿ ಗಳಿಸಿದ ಬ್ರಿಟೀಷ್ ಪ್ರಜೆಗಳಿಗೆ ಮೀಸಲಾಗಿತ್ತು. ಅಂದು ನಡೆದ ಘಟನೆ ಈ ರೀತಿಯಿದೆ. ಪ್ರೊ.ಹೆನ್ಸಮೇನ್ ಆಗಿನ ಸರ್ಕಾರಿ ಕಾಲೇಜಿನ ಪ್ರಿನ್ಸಿಪಾಲರು. ಪ್ರೊ. ಹೆನ್ಸಮೇನರು ತರಗತಿಯಲ್ಲಿ ಉಪನ್ಯಾಸ ನೀಡುತ್ತಿದ್ದರು. ಪ್ರಿನ್ಸಿಪಾಲರು ತರಗತಿಯಲ್ಲಿ ನೀಡುತ್ತಿದ್ದ ಉಪನ್ಯಾಸದ ವಿಷಯದ ಕಡೆಗೆ ಗಮನಹರಿಸದೆ ವಿದ್ಯಾರ್ಥಿ ಗೋಪಾಲಕೃಷ್ಣಯ್ಯ ಪ್ರಿನ್ಸಿಪಾಲರ ಭಾವಚಿತ್ರವನ್ನು ತಮ್ಮ ಪುಸ್ತಕದಲ್ಲಿ ಚಿತ್ರಿಸಿರುವುದರಲ್ಲಿ ನಿರತರಾಗಿದ್ದರು. ಉಪನ್ಯಾಸ ನೀಡುತ್ತಿದ್ದ ಪ್ರೊ. ಹೆನ್ಸಮೇನರು ಗೋಪಾಲಕೃಷ್ಣಯ್ಯರ ಗಮನ ಪಾಠದ ಕಡೆ ಇಲ್ಲದಿರುವುದನ್ನು ಗಮನಿಸಿ ಹತ್ತಿರ ಬಂದು ಪುಸ್ತಕ ತೆಗೆದು ನೋಡಿದರೆ ಅಂದವಾಗಿ ಮೂಡಿ ಬಂದ ಅವರದೇ ಭಾವಚಿತ್ರ. ಪ್ರೊ:ಹೆನ್ಸಮೇನ್ ಸಿಟ್ಟಿನಿಂದ ಶಿಷ್ಯರಾದ ಗೋಪಾಲಕೃಷ್ಣರಾಯರನ್ನು ಬೈಯ್ಯಲ್ಲಿಲ್ಲ. ಸಂತೋಷದಿಂದ ಶಿಷ್ಯ ಕಲಾ ಪ್ರತಿಭೆಯನ್ನು ಪ್ರಶಂಸಿದರು."ಇನ್ನೂ ಮುಂದೆ ನೀನು ಚಿತ್ರಕಲೆಯನ್ನೆ ಅಭ್ಯಾಸಮಾಡು" ಎಂದು ಸಲಹೆ ನೀಡಿದರು ಬೊಂಬಾಯಿಯ ಜೆ. ಜೆ. ಕಲಾಶಾಲೆಗೆ ಪ್ರವೇಶ ಪಡೆದು ಚಿತ್ರಕಲೆಯಲ್ಲಿಯೇ ಶಿಕ್ಷಣಮುಂದುವರಿಸುವಂತೆ ಮಾರ್ಗದರ್ಶನ ನೀಡಿದರು. ಹಾಗೆಯೇ ಅನೇಕರಿಂದ ಈ ಬಗ್ಗೆ ಹೇಳಿಸಿ, ಅಂದು ಅವರ ಶಿಷ್ಯ ಗೋಪಾಲಕೃಷ್ಣಯ್ಯ ಮಹಾನ್ ಕಲಾ ಪ್ರೌಢನಾಗುವ ಕನಸನ್ನು ಕಂಡರು.

ಈ ಮೊದಲೇ ಚಿತ್ರಕಲೆಯ ಬಗ್ಗೆ ಅತೀವ ಆಸಕ್ತಿ ಹೊಂದಿದ್ದ ಶ್ರೀ ಗೋಪಾಲಕೃಷ್ಣಯ್ಯ ಅವರಿಗೆ ಪ್ರಿನ್ಸಿಪಾಲರ ಮಾತು, ಸಲಹೆ ಉತ್ಸಾಹ ಹೆಚ್ಚಿಸಿತು. ಇದಕ್ಕೆ ಸರಿಯಾಗಿ ತಂದೆ ಶ್ರೀ ಶ್ರೀನಿವಾಸರಾವ್ ಅವರು ಪ್ರಯತ್ನ ಆರಂಭಿಸಿದರು. ಸಹೋದರ ಸಂಬಂಧಿಯಾಗಿದ್ದ ಸರ್. ಪಿ.ಆರ್.

ರಾವ್ ಅವರನ್ನು ಭೇಟಿಯಾಗಿ ವಿಷಯ ತಿಳಿಸಿದರು. ಸರ್. ಪಿ.ಆರ್. ರಾವ್ ಭಾರತ ಸರ್ಕಾರದಲ್ಲಿ ಅಡಿಷನಲ್ ಸೆಕ್ರೆಟರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಐ.ಪಿ.ಎಸ್. ಅಧಿಕಾರಿಯಾಗಿದ್ದ ಸರ್. ಪಿ. ಆರ್. ರಾವ್ ಆರ್ಥಿಕ ಸಹಾಯ ನೀಡಿ, ಜೆ. ಜೆ. ಸ್ಕೂಲಿಗೆ ಪ್ರವೇಶ ಪಡೆದು ಕಲಾ ಶಿಕ್ಷಣ ಮುಂದುವರಿಸುವಂತೆ ಪ್ರೋತ್ಸಾಹಿಸಿದರು. ಪಾವಂಜೆ ಗೋಪಾಲಕೃಷ್ಣಯ್ಯ ಅವರಿಗೆ ಸರ್. ಪಿ. ಆರ್. ರಾವ್ ಅವರ ಬಗ್ಗೆ ಕೊನೆಯವರೆಗೂ ಅತೀವ ಗೌರವವಿತ್ತು. ಇದನ್ನು ಗೋಪಾಲಕೃಷ್ಣಯ್ಯ ಅವರ ದಿನಚರಿ ಪುಸ್ತಕವನ್ನು ಗಮನಿಸಿದಾಗ ತಿಳಿಯಬಹುದು. ಗೋಪಾಲಕೃಷ್ಣಯ್ಯ ಅವರು ಗೌರವದಿಂದ ರಚಿಸಿದ ಸರ್. ಪಿ. ಆರ್. ರಾವ್ ಅವರ ಭಾವಚಿತ್ರ ಈಗಲೂ ಮಂಗಳೂರಿನ ಗೋಪಾಲಕೃಷ್ಣ ದೇವಾಲಯದ ರಸ್ತೆಯಲ್ಲಿರುವ "ಪಾವಂಜೆ ಮನೆ"ಯಲ್ಲಿದೆ.

ಶ್ರೀ ಗೋಪಾಲಕೃಷ್ಣಯ್ಯರು ಕ್ರಿ. ಶ. ೧೮೮೫ರಲ್ಲಿ ಜೆ. ಜೆ. ಕಲಾ ಶಾಲೆಯಲ್ಲಿ ಪ್ರವೇಶ ಪಡೆದರು. ಅತ್ಯಂತ ಶಿಸ್ತಿನ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದ ಗೋಪಾಲಕೃಷ್ಣಯ್ಯರು ತಮ್ಮ ಕಲಾ ಚಾತುರ್ಯದಿಂದ ಎಲ್ಲರನ್ನೂ ಬೆರಗುಗೊಳಿಸಿದ್ದರು. ಅವರು ಅಂದು ಜೆ. ಜೆ. ಕಲಾ ಶಾಲೆಯಲ್ಲಿ ಚಿತ್ರಿಸಿದ ಚಿತ್ರಗಳು ಈಗಲೂ ಸುರಕ್ಷಿತವಾಗಿ ರಾಯರ ಮೊಮ್ಮಕ್ಕಳ ಬಳಿಯಿದೆ. ಈ ಚಿತ್ರಗಳನ್ನು ಗಮನಿಸಿದಾಗ ಅವರಲ್ಲಿದ್ದ ಕಲಾಕಲಿಕೆಯಲ್ಲಿನ ಶ್ರದ್ದೆ , ಆಸಕ್ತಿ , ಕಲಾ ಪ್ರೌಢಿಮೆಯ ಬಗ್ಗೆ ತಿಳಿಯಬಹುದು. ಅತ್ಯಂತ ಅತ್ಯಂತ ಶಿಸ್ತಿನಿಂದ ರಚಿಸಿರುವ ಚಿತ್ರಗಳು ನೈಜತೆಯಿಂದ ತುಂಬಿದೆ. ಚಿತ್ರಕಲೆ ಕಲಿಯುವ ಸಮಯದಲ್ಲಿ ಮಾನವರ ಶರೀರ ಶಾಸ್ತ್ರಕ್ಕೆ ಹೆಚ್ಚು ಒತ್ತು ಕೊಟ್ಟು ಕಲಿತಿರುವುದನ್ನು ಗಮನಿಸಬಹುದು.

ಕಲಾ ಶಾಲೆಯಲ್ಲಿನ ಎಲ್ಲಾ ಕಲಾ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಪಡೆದು ತೇರ್ಗಡೆಯಾದರು. ಶ್ರೀ ಪಾವಂಜೆಯವರ ಹೆಸರು ಜೆ. ಜೆ. ಕಲಾಶಾಲೆಯಲ್ಲಿ "ಪ್ರತಿಭಾವಂತ ವಿದ್ಯಾರ್ಥಿ"ಗಳ ಪಟ್ಟಿಯಲ್ಲಿ ಸೇರ್ಪಡೆಯಾಯಿತು.

ಜೆ. ಜೆ. ಕಲಾ ಶಾಲೆಯಲ್ಲಿ ಪಡೆದ ಶಿಕ್ಷಣದ ನಂತರ ಅವರಲ್ಲಿದ್ದ ಅಗಾಧ ಪ್ರತಿಭೆಗೆ ಅದೇ ಶಾಲೆಯಲ್ಲಿ ಕಲಾ ಸೇವೆಗೆ ಅವಕಾಶ ದೊರೆಯಿತು (ಕ್ರಿ. ಶ. ೧೮೮೬)ಕಲಾಶಾಲೆಯಲ್ಲಿ ಅಧ್ಯಾಪಕರಾಗಿ ಅತ್ಯಂತ ಶಿಸ್ತಿನ ದಕ್ಷ ಕಲಾ ಅಧ್ಯಾಪಕರೆಂಬ ಹೆಸರು ಪಡೆದಿದ್ದರು. ತಮ್ಮ ಸೇವಾವಧಿಯಲ್ಲಿ ಕಲಾಶಾಲೆಯ ಶಿಷ್ಯ ವೃಂದಕ್ಕೆ ನೆಚ್ಚಿನ ಅಧ್ಯಾಪಕರಾಗಿದ್ದರು.

ಗೋಪಾಲಕೃಷ್ಣಯ್ಯರಿಗೆ ಖಾದಿಯ ಬಗ್ಗೆ ಅತ್ಯಂತ ಒಲವು. ಖಾದಿ ಅವರ ಇಷ್ಟವಾದ ಉಡುಪು. ಯಾವಾಗಲೂ ಶುಭ್ರವಾದ ಶ್ವೇತ ವಸ್ತ್ರವನ್ನೇ ಧರಿಸುತ್ತಿದ್ದರು. ಬಿಳಿ ಧೋತಿ, ಅಂಗಿ, ತಲೆಗೆ ಬಿಳಿ ರುಮಾಲು (ಮುಂಡಾಸು) ಧರಿಸಿ ಬಿಳಿ ವಸ್ತ್ರಧಾರಿಯಾಗಿ ಶಿಸ್ತಿನಿಂದ ವರ್ತಿಸುತ್ತಿದ್ದ ರಾಯರಿಗೆ 'ವೈಟ್ ಮ್ಯಾನ್ ' -ಬಿಳಿ ವ್ಯಕ್ತಿ ಎಂಬ ಮೆಚ್ಚಿನ ಹೆಸರನ್ನು ಶಿಷ್ಯವೃಂದದಿಂದ ಗಳಿಸಿದರು. ಅವರು ಅತ್ಯಂತ ಶಿಸ್ತಿನ ವ್ಯಕ್ತಿಯಾಗಿದ್ದರೆಂಬುದನ್ನು ಅವರ ದಿನಚರಿ , ಸಂಗ್ರಹಿಸಿದ ಪುಸ್ತಕ , ಅಭ್ಯಾಸದ ಪುಸ್ತಕಗಳನ್ನು ಗಮನಿಸಿದಾಗ ತಿಳಿಯಬಹುದು.

ಹೆಸರಿನ ಗೊಂದಲ

ಶ್ರೀಗೋಪಾಲಕೃಷ್ಣಯ್ಯ ಪಾವಂಜೆ ಅವರು ಬೊಂಬಾಯಿ ಕಲಾಶಾಲೆ ಸೇರಿದ ನಂತರ ಪಾವಂಜೆ ಗೋಪಾಲಕೃಷ್ಣಯ್ಯ ಎಂಬ ಹೆಸರು ಪಡೆದರು. ಅಲ್ಲಿದ್ದ ಬ್ರಿಟಿಷರು 'ಮಿಸ್ಟರ್ ಪಾವಂಜೆ' ಎಂದೇ ಸಂಬೋಧಿಸುತ್ತಿದ್ದರು.

ಕೆಲವರು ಮಿಸ್ಟರ್ ಪಾವಂಜೆ ಗೋಪಾಲಕೃಷ್ಣಯ್ಯ , ಪಾವಂಜೆ ಗೋಪಾಲ ಕೃಷ್ಣರಾಯರು, ಪಾವಂಜೆರಾಯರು ಹೀಗೆ ನಾನಾ ರೀತಿಯಲ್ಲಿ ಸಂಬೋಧಿಸಿದ ಉದಾಹರಣೆಗಳಿವೆ. ಕಲಾವಿದ ದಿ||ನರಹರಿ ಗೋಪಾಲಕೃಷ್ಣ ಪಾವಂಜೆ (ದಿ|| ಎನ್. ಜಿ. ಪಾವಂಜೆ), ಕಲಾಶಿಕ್ಷಕ ದಿ|| ಪಾವಂಜೆ ಭುಜಂಗ ರಾವ್ ಇವರುಗಳು ಗೋಪಾಲಕೃಷ್ಣಯ್ಯನವರ ಪುತ್ರರು. ಆದರೆ ಕಲಾಕ್ಷೇತ್ರದಲ್ಲಿ ಅನೇಕರು 'ಪಾವಂಜೆ'ಎಂಬ ಹೆಸರಲ್ಲಿನ ವ್ಯತ್ಯಾಸದ ಅರಿವಿಲ್ಲದೆ ಎಲ್ಲಾ ಹೆಸರುಗಳು ' ಏಕವ್ಯಕ್ತಿಯ'ಹೆಸರೆಂದು ಭಾವಿಸಿದ್ದಾರೆ.

ಕಲಾಪ್ರತಿಭೆ ಮರಳಿ ತವರೂರಿಗೆ

ಶ್ರೀ ಪಾವಂಜೆ ರಾಯರು ಬೊಂಬಾಯಿಯಲ್ಲಿನ ಜೆ. ಜೆ. ಕಲಾಶಾಲೆಯಲ್ಲಿ ಸೇವೆಯಲ್ಲಿದ್ದ ಸಮಯದಲ್ಲಿ ಬೊಂಬಾಯಿಯಲ್ಲಿ ಪ್ಲೇಗ್ ಕಾಯಿಲೆಯ ಕಾಟ ದಿನದಿಂದ ದಿನಕ್ಕೆ ಹೆಚ್ಚುತ್ತಿತ್ತು. ಶ್ರೀ ಶ್ರೀನಿವಾಸ ರಾವ್ ಅವರಿಗೆ ಏಕಮಾತ್ರ ಪುತ್ರರಾಗಿದ್ದ ಶ್ರೀ ಗೋಪಾಲ ಕೃಷ್ಣಯ್ಯರು ಮರಳಿ ಮಂಗಳೂರಿಗೆ ಬರಲೆಂಬ ಆಶಯ. ಪ್ಲೇಗ್ ರೋಗದ ಹರಡುವಿಕೆ ಹೆಚ್ಚಾದಾಗ ಮರಳಿ ಊರಿಗೆ ಬರಲು ಒತ್ತಾಯಿಸಿದರು. ಶ್ರೀ ಗೋಪಾಲಕೃಷ್ಣಯ್ಯ ಜೆ. ಜೆ. ಕಲಾಶಾಲೆಯಲ್ಲಿದ್ದ ಹುದ್ದೆಗೆ ರಾಜೀನಾಮೆ ನೀಡಿ ತಂದೆಯ ಅಪೇಕ್ಷೆಯಂತೆ ಊರಿಗೆ ಮರಳಿಬಂದರು (ಕ್ರಿ. ಶ. ೧೯೦೧). ಗೋಪಾಲಕೃಷ್ಣಯ್ಯರು ಬೊಂಬಾಯಿಯ ಕಲಾಶಾಲೆಗೆ ಸೇರಿ ಹದಿನೈದು ವರ್ಷಗಳಕಾಲ ಸೇವೆ ಸಲ್ಲಿಸಿ ನಿವೃತ್ತರಾಗುವ ವೇಳೆಯಲ್ಲಿ 'ಆರ್ಟ್ ಮಾಸ್ಟರ್ ' ತರಗತಿಯ ಪ್ರೊಫೆಸರ್ ಆಗಿದ್ದರು. ಜೆ. ಜೆ. ಕಲಾ ಶಾಲೆಯಲ್ಲಿ ಇವರಿಂದ ಕಲಾ ಶಿಕ್ಷಣ ಪಡೆದ ಅನೇಕ ವಿದ್ಯಾರ್ಥಿಗಳು ಮಹಾನ್ ಕಲಾವಿದರಾಗಿ ರೂಪಗೊಂಡರು. ಉದಾಹರಣೆಗೆ ದಿ|| ಎಂ.ವಿ. ದುರಂದರ್ (ಕಾಲಗೋಡ

ಪ್ರತಿಮೆಯ ಶಿಲ್ಪಿ) ಮತ್ತು ಶ್ರೀ ಆಗಸ್ಕರ್‌ಗಳು ರಾಯರ ಶಿಷ್ಯರು.

ಬೊಂಬಾಯಿಯಲ್ಲಿ ಆಗಿದ್ದ ಪ್ಲೇಗ್ ರೋಗದ ಕಾಟ ಕರ್ನಾಟಕದ ಕಲಾ ರತ್ನನ ಕಲಾಸೇವೆ ತವರೂರಿನಲ್ಲಿ ಮುಂದುವರಿಯಲು ಸಹಾಯಕವಾಯಿತು. ಆಗ ಮಂಗಳೂರಿನಲ್ಲಿ ಕಲಾವಿದರೇ ಇರಲಿಲ್ಲ. ಬೊಂಬಾಯಿಯಿಂದ ಮಂಗಳೂರಿಗೆ ಬಂದ ನಂತರ ಮಂಗಳೂರಿನ ಸಂತ ಆನ್ಸ್ ಕಾಲೇಜಿನಲ್ಲಿ (ಸೈಂಟ್ ಆನ್ಸ್ ಕಾಲೇಜ್) ತಾತ್ಕಾಲಿಕ ಕಲಾ ಶಿಕ್ಷಕರಾಗಿ ಕಲಾ ಸೇವೆ ಮುಂದುವರಿಸಿದರು. ಗೋಪಾಲಕೃಷ್ಣಯ್ಯ ಮಂಗಳೂರಿಗೆ ಬಂದು ಕಲಾ ಶಿಕ್ಷಕರಾಗುವವರೆಗೂ ಚಿತ್ರಕಲೆ ಶಾಲಾ-ಕಾಲೇಜಿನಲ್ಲಿ ಪಠ್ಯ ವಿಷಯವಾಗಿರಲಿಲ್ಲ. ಶ್ರೀ ಗೋಪಾಲಕೃಷ್ಣಯ್ಯ ಅವರಿಂದಲೇ ಕಲಾ ಶಿಕ್ಷಣ ಬೋಧಿಸುವ ಪದ್ಧತಿ ಸಂತ ಆನ್ಸ್ ಕಾಲೇಜಿನಲ್ಲಿ ಜಾರಿಗೆ ಬಂತು. ಆಗ ರಾಯರಿಗೆ ದೊರೆಯುತ್ತಿದ್ದ ಸಂಬಳ ಕೇವಲ ರೂ. ೩.೦೦(ರೂಪಾಯಿ ಮೂರು).

ನಂತರ ಕೆಲವು ಸಮಯದ ನಂತರ ಸಂತ ಆನ್ಸ್ ಕಾಲೇಜಿನ ಹುದ್ದೆ ಬಿಟ್ಟು, ಮಂಗಳೂರಿನ ಕೆನರಾ ಹೈಸ್ಕೂಲಿನಲ್ಲಿ ಕಲಾ ಶಿಕ್ಷಕರಾಗಿ ಸೇವೆಗೆ ಸೇರಿದರು (ಕ್ರಿ.೧೯೦೨). ಆಗ ಅಲ್ಲಿ ರಾಯರ ಸಂಬಳ ರೂ. ೫.೦೦ (ರೂಪಾಯಿ ಐದು), ಕೆಲಸ ಮಾತ್ರ ಪೂರ್ಣಾವಧಿಯಾಗಿತ್ತು. ಶ್ರೀಗೋಪಾಲಕೃಷ್ಣಯ್ಯರ ಸೇರ್ಪಡೆಯಿಂದ ಅಲ್ಲಿಯ ಪಠ್ಯ ವಿಷಯದಲ್ಲಿ ಚಿತ್ರಕಲೆ ಒಂದು ವಿಷಯವಾಗಿ ಸೇರ್ಪಡೆಯಾಗಿ ಜಾರಿಗೆ ಬಂತು. ಹೀಗೆ ಮಂಗಳೂರಿನಲ್ಲಿ ವಿದ್ಯಾರ್ಥಿಗಳಿಗೆ ಕಲೆಯನ್ನು ಅಭ್ಯಸಿಸುವ ಅವಕಾಶ ದೊರೆಯಿತು. ಹೀಗೆ ಕರ್ನಾಟಕದ ಕಲಾಕುಡಿ ಮರಳಿ ನಾಡಿಗೆ ಮರಳಿ ತವರೂರಿನಲ್ಲಿ ಹಲವಾರು ಕಲಾಕುಡಿ ಮೊಳಕೆಯೊಡೆದು ಚಿಗುರಲು

ಸಹಾಯವಾಯಿತು.

ಆಗ ಮಂಗಳೂರು ಮದ್ರಾಸ್ ಪ್ರಾಂತದ ಆಡಳಿತಕ್ಕೆ ಒಳಪಟ್ಟಿತ್ತು. ಆದ್ದರಿಂದ ರಾಯರು ಮತ್ತೆ ಮದ್ರಾಸ್ ಸರ್ಕಾರದ ಕಲಾಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕಿತ್ತು. ಮದ್ರಾಸ್ ಸರ್ಕಾರದ ಕಲಾಪರೀಕ್ಷೆ ಬರೆದು ಉತ್ತೀರ್ಣರಾಗಿ , ಕಲಾ ಶಿಕ್ಷಕರಾಗಿ ಕೆನರಾ ಶಾಲೆಯಲ್ಲಿಯೇ ಸೇವೆ ಮುಂದುವರಿಸಿದರು.

ಆದರ್ಶ ಶಿಕ್ಷಕರು

ಅತ್ಯಂತ ಶಿಸ್ತಿನ ವ್ಯಕ್ತಿಯಾಗಿ - ಶಿಕ್ಷಕರಾಗಿದ್ದ ಅವರಿಗೆ ಪ್ರತಿಯೊಬ್ಬ ವಿದ್ಯಾರ್ಥಿಯ ಬಗ್ಗೆ ಸೂಕ್ಷ್ಮ ಗಮನವಿರುತ್ತಿತ್ತು. ತನ್ನ ಪ್ರತಿ ವಿದ್ಯಾರ್ಥಿಯ ನಡವಳಿಕೆ, ಬುದ್ಧಿವಂತಿಕೆ ಸಾಮರ್ಥ್ಯವನ್ನು ಬಲ್ಲವರಾಗಿದ್ದರು. ಶುಭ್ರವಾದ ಬಿಳಿ ಉಡುಪು ಧರಿಸಿ ಅತ್ಯಂತ ಶಿಸ್ತಿನ ನಡವಳಿಕೆಯಿಂದ ಬಹು ಜನರ ಗಮನ ಸೆಳೆದಿದ್ದರು. ಒಮ್ಮೆ ಇವರ ಶಿಸ್ತಿಗೆ "ಹೇಗಾದರೂ ಭಂಗ ಉಂಟುಮಾಡಬೇಕೆಂಬುದು" ಕೆಲವು ವಿದ್ಯಾರ್ಥಿಗಳ ಹಟವಾಗಿತ್ತು. ಅಂತಹ ವಿದ್ಯಾರ್ಥಿಗಳಲ್ಲಿ ಒಬ್ಬರು , ರಾಯರು ಕಪ್ಪುಹಲಗೆಯ ಕಡೆ ತಿರುಗಿ ಚಿತ್ರ ಬರೆಯುತ್ತಿದ್ದಾಗ ಹಿಂದಿನಿಂದ ಅವರ ಶುಭ್ರ ವಸ್ತ್ರಕ್ಕೆ, ಕಪ್ಪು ವಸ್ತ್ರಕ್ಕೆ ಕಪ್ಪು ಶಾಹಿಹಾಕಿ ಅವರ ಶಿಸ್ತಿಗೆ ಭಂಗ ತರುವ ಪ್ರಯತ್ನ ಮಾಡಿದರು. ಪಾವಂಜೆ ರಾಯರು ಮರು ಮಾತನಾಡದೆ ನಿಧಾನವಾಗಿ ವಿದ್ಯಾರ್ಥಿಗಳ ಕಡೆ ತಿರುಗಿ ವಿದ್ಯಾರ್ಥಿಗಳನ್ನು ಗಮನಿಸುತ್ತಾ ಒಬ್ಬ ವಿದ್ಯಾರ್ಥಿಗೆ ಎದ್ದುನಿಲ್ಲುವಂತೆ ಹೇಳಿ ಶಿಕ್ಷೆನೀಡಿದರು. ಈಗಲೂ ಈ ಘಟನೆಯನ್ನು ನೆನೆಯುತ್ತಾರೆ. ಅಂದು ಅವರ ಶಿಸ್ತಿಗೆ ಭಂಗ ತರಲು ಯತ್ನಿಸಿ ವಿಫಲರಾದ

ರಾಯರ ಶಿಷ್ಯರಾದ ಶ್ರೀ ಆರ್. ಮೇಲ್ಮನೆ (ಪ್ರಿನ್ಸಿಪಾಲರಾಗಿ ನಿವೃತ್ತರಾದ ನಂತರ ಈಗ ಬೊಂಬಾಯಿಯಲ್ಲಿ ವಾಸಿಸುತ್ತಿದ್ದಾರೆ) ತಮ್ಮ ಗುರುಗಳು "ಎಷ್ಟರ ಮಟ್ಟಿಗೆ ಯಾವ ವಿದ್ಯಾರ್ಥಿ ಯಾವ ಕೆಲಸ ಮಾಡಿಯಾನು ಎಂಬ ಅರಿವು ಅವರಿಗಿತ್ತು. ಎಲ್ಲಾ ವಿಧದಲ್ಲೂ ಶಿಕ್ಷಕರ ವೃತ್ತಿಗೆ ಅರ್ಹರಾಗಿ , ದಕ್ಷ ಶಿಕ್ಷಕರಾಗಿದ್ದರು. ಅವರ ನಡವಳಿಕೆ ಶಿಸ್ತು ಬೋಧನೆ ವರ್ಣಿಸಲಾಗದು" ಎಂದು ತಮ್ಮ ಗುರುಗಳ ಬಗ್ಗೆ ಶ್ರೀ ಆರ್. ಆರ್. ಮೇಲ್ಮನೆಯವರು ರಾಯರ ಮೊಮ್ಮಕ್ಕಳ ಬಳಿ ಹೇಳಿಕೊಳ್ಳುತ್ತಾರೆ.

ಪಾವಂಜೆ ಗೋಪಾಲಕೃಷ್ಣಯ್ಯ ಅವರು ಮಹಾತ್ಮಾ ಗಾಂಧಿಯವರ ಅನುಯಾಯಿ. ಖಾದಿ ಪ್ರೇಮಿ , ಸ್ವಾತಂತ್ರ್ಯವಾದಿಯಾಗಿದ್ದರು. ಸ್ವತಃ ಚರಕದಿಂದ ನೂಲು ತೆಗೆದು ಅದೇ ನೂಲಿನಿಂದ ತಯಾರಿಸಿದ ಖಾದಿ ಬಟ್ಟೆಯನ್ನೇ ಧರಿಸುತ್ತಿದ್ದರು. ಸ್ವಾತಂತ್ರ್ಯ ವಾದಿಯಾಗಿದ್ದರು ಸಕ್ರಿಯವಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲಿಲ್ಲ. ಶಿಕ್ಷಕರು ಚಳುವಳಿಯಲ್ಲಿ ಭಾಗವಹಿಸುವ ಬಗ್ಗೆ ರಾಯರ ವಿರೋಧವಿತ್ತು. "ಶಿಕ್ಷಕರು ಚಳುವಳಿಗೆ ಇಳಿದರೆ ವಿದ್ಯಾರ್ಥಿಗಳಿಗೆ ಅಗತ್ಯ ವಾಗಿರುವ ಶಿಕ್ಷಣ ದೊರೆಯುವುದಿಲ್ಲ. ವಿದ್ಯೆಯಿಂದ ವಿದ್ಯಾರ್ಥಿಗಳು ವಂಚಿತರಾಗುತ್ತಾರೆ. ಚಳುವಳಿಯ ಅವಧಿಯಲ್ಲಿನ ವಿದ್ಯಾರ್ಥಿಗಳು ಸಂಪೂರ್ಣ ಅನಕ್ಷರಸ್ಥರಾದರೆ ದೇಶದಲ್ಲಿ ಅನಕ್ಷರಸ್ಥರ ದೊಡ್ಡ ಸಮೂಹ ಬೆಳೆದು ಸಮಸ್ಯೆ ಎದುರಾಗುತ್ತದೆ. ಮಕ್ಕಳಿಗೆ ವಿದ್ಯಾರ್ಥಿ ಜೀವನದಲ್ಲಿ ಸರಿಯಾದ ಮಾರ್ಗದರ್ಶನ ಸಿಗದೆ ಹೋದಲ್ಲಿ ಮಕ್ಕಳ ಜ್ಞಾನಾರ್ಜನೆಯಾಗದೆ ಅವರ ಭವಿಷ್ಯ ಶೂನ್ಯವಾಗುತ್ತದೆ" ಎಂಬುದು ರಾಯರ ಅಭಿಮತ. ಗಾಂಧೀಜಿಯವರು ಶಿಕ್ಷಕರಿಗೆ ನೀಡಿದ್ದ ಕರೆ - ಶಿಕ್ಷಕರು ಚಳುವಳಿಯಲ್ಲಿ ಭಾಗವಹಿಸುವ ಬಗ್ಗೆ

ರಾಯರಿಗೆ ವಿರೋಧವಿತ್ತು. ಈ ಮೂಲಕ ಪಾವಂಜೆ ರಾಯರಿಗೆ ಶಿಕ್ಷಣ ಕ್ಷೇತ್ರದಲ್ಲಿನ ಬೋಧನೆಯಲ್ಲಿದ್ದ ಕಾಳಜಿ ಹಾಗೂ ಅವರಿಗಿದ್ದ ದೂರದೃಷ್ಟಿಯ ಬಗ್ಗೆ ತಿಳಿಯಬಹುದು.

ಕೆನರಾ ಹೈಸ್ಕೂಲಿನಲ್ಲಿ ಇಪ್ಪತ್ತನಾಲ್ಕು ವರ್ಷಗಳ ಕಾಲ ಶಿಕ್ಷಕರಾಗೆ ಸೇವೆ ಸಲ್ಲಿಸಿದರು. ತಮ್ಮ ಸೇವಾವಧಿಯಲ್ಲಿ ಶಾಲೆಯ ಬೆಳವಣಿಗೆಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ವಿದ್ಯಾರ್ಥಿ ವೃಂದದಲ್ಲಿ ಶಿಸ್ತಿನ ನೆಚ್ಚಿನ ಶಿಕ್ಷಕರಾಗಿದ್ದರು. ಕ್ರಿ. ಶ , ೧೭-೬-೧೯೨೬ಮತ್ತು ಕ್ರಿ. ಶ. ೨೫-೬-೧೯೨೬ ರಂದು ಕೆನರಾ ಶಾಲೆಯ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಹಿರಿಯ ವಿದ್ಯಾರ್ಥಿಗಳು ಚಿನ್ನದ ಪದಕ , ಸನ್ಮಾನ ಪತ್ರ ನೀಡಿ ಸನ್ಮಾನಿಸಿ ಗೌರವ ಸೂಚಿಸಿದ್ದಾರೆ.

ಮಕ್ಕಳಿಗೆ ಶಿಕ್ಷಣ ನೀಡುವುದರಲ್ಲಿ ಪಾವಂಜೆಯವರಿಗೆ ವಿಶೇಷ ಆಸಕ್ತಿ. ಕೆನರಾ ಶಾಲೆಯಲ್ಲಿ ಚಿತ್ರಕಲೆಯಲ್ಲದೆ ನೀತಿ ಪಾಠ ವಿಷಯಗಳನ್ನು ಬೋಧಿಸುತ್ತಿದ್ದರು. ಇವರ ನೀತಿ ಪಾಠ ಕೇಳಲು ಶಾಲೆಯ ಇತರ ಅಧ್ಯಾಪಕರುಗಳು ಸಹ ಬರುತ್ತಿದ್ದರು. ವಿದ್ಯಾರ್ಥಿಗಳಿಗೆ ಹಣಕಾಸಿನ ಸಹಾಯ ನೀಡಿದ ನಿದರ್ಶನಗಳು ಅನೇಕ. ನಿವೃತ್ತಿಯ ನಂತರವೂ ತಮ್ಮ ಮನೆಯಲ್ಲಿಯೇ ಉಚಿತವಾಗಿ ಕಲಾಶಿಕ್ಷಣ ನೀಡುವ ಪದ್ಧತಿಯನ್ನು ಮುಂದುವರಿಸಿ, ಅಂತಿಮ ಕಾಲದವರೆಗೂ ಅನೇಕರಿಗೆ ಶಿಕ್ಷಣ ಮಾರ್ಗದರ್ಶನ ನೀಡಿದರು. ಇವರಿಂದಾಗಿ ಅನೇಕ ಚಿಗುರುತ್ತಿರುವ ಕಲಾವಿದರಿಗೆ ಸರಿಯಾದ ಮಾರ್ಗದರ್ಶನ ದೊರೆತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಲಾಕ್ಷೇತ್ರ - ಕಲಾವಿದರ ಸಂಖ್ಯೆ ಬೆಳೆಯಲು ಸಹಾಯಕವಾಯಿತೆಂದರೆ ತಪ್ಪಾಗಲಾರದು. ಕಲಾವಿದರುಗಳಾದ ವಿ॥ಎಸ್.

ಆರ್. ಸಜೀಪರು, ದಿ|| ಎಲ್. ಕೆ ಶೇವಗೂರು, ದಿ||ವಿ.ಜಿ.ಶೆಣೈ, ದಿ||ಗೋಪಾಲ ರಾವ್, ದಿ||ಸೈಮನ್, ಎ. ಬಿ. ಶೆಟ್ಟಿ , ಎಂ. ವಾಸುದೇವ ರಾಯರು , ಶ್ರೀ ವೆಂಕಟರಮಣಯ್ಯ, ಬಿ. ಪಿ ,ಬಾಯರಿ (ಉಡುಪಿ ಚಿತ್ರ ಕುಟೀರ)ಮುಂತಾದವರು;ಗೋಪಾಲಕೃಷ್ಣರಾಯರ ವಿದ್ಯಾರ್ಥಿಗಳು. ಕಲಾವಿದ ಶ್ರೀ ಕೆ. ಕೆ.ಹೆಬ್ಬಾರರಿಗೆ ಪ್ರಾಥಮಿಕ ಹಂತದಲ್ಲಿ ಕಲಾ ಶಿಕ್ಷಣ ಮಾರ್ಗದರ್ಶನ ಗೋಪಾಲಕೃಷ್ಣಯ್ಯ ಅವರಿಂದ ದೊರೆತಿದೆ.

ಚಿತ್ರಕಲೆಯ ಶಿಕ್ಷಣದ ಬಗ್ಗೆ ಅವರಿಗಿದ್ದ ಕಾಳಜಿಯ ಬಗ್ಗೆ ಅವರ ಸಂಗ್ರಹಗಳ ಮೂಲಕ ತಿಳಿಯಬಹುದು. ಚಿತ್ರಕಲೆ ಯಾವ ರೀತಿ ಬೋಧಿಸಬೇಕು , ಯಾವ ಯಾವ ವಿಷಯ ಹೇಗೆ ಬೋಧಿಸಬೇಕೆಂಬ ಅಂಶಗಳ ಬಗ್ಗೆ ರಾಯರು ಟಿಪ್ಪಣಿ ಬರೆದಿಟ್ಟಿದ್ದಾರೆ. ಚಿತ್ರಕಲೆಯ ಬೋಧನೆಯ ಬಗ್ಗೆ ಅನುಕೂಲವಾಗುವಂತೆ ಪುಸ್ತಕ ಪ್ರಕಟಿಸುವ ಅಭಿಲಾಷೆ ಅವರಲ್ಲಿತ್ತು ಎಂಬುದನ್ನು ತಿಳಿಯಬಹುದು. ಹಸ್ತಪ್ರತಿಯಲ್ಲಿರುವ ಪುಸ್ತಕದಲ್ಲಿ ಅತಿ ಸರಳವಾಗಿ ಚಿತ್ರಗಳನ್ನು ಸ್ಪಷ್ಟವಾಗಿ ಬರೆದಿದ್ದಾರೆ. ಹಾಗೆಯೇ ಬಣ್ಣ , ಕುಂಚಗಳ ತಯಾರಿಸಿಕೊಳ್ಳುವ ಡ್ರಾಯಿಂಗ್ ರೂಮಿನಲ್ಲಿರಬೇಕಾದ ಬೆಳಕಿನ ವ್ಯವಸ್ಥೆ ಮೇಜು ಕುರ್ಚಿಗಳ ವ್ಯವಸ್ಥೆ ಬಗ್ಗೆ ಟಿಪ್ಪಣಿ ಬರೆದಿದ್ದಾರೆ. ಪ್ರತಿಯೊಂದು ಟಿಪ್ಪಣಿಯೂ ಕಲಾವಿದನಿಗೆ ಕಲೆಯ ಬಗ್ಗೆ ಸಮಗ್ರ ಮಾಹಿತಿ ಒದಗಿಸುತ್ತದೆ.

ಬಹುಮುಖ ಪ್ರತಿಭೆ

ಶ್ರೀ ಗೋಪಾಲಕೃಷ್ಣಯ್ಯ ಅವರಿಗೆ ಕೇವಲ ಚಿತ್ರಕಲೆ ಮಾತ್ರ ಒಲಿದಿರಲಿಲ್ಲ. ಜೊತೆಯಲ್ಲಿಯೇ ಅವರು ಬಹು ಭಾಷಾ ಪಾಂಡಿತ್ಯ

ಹೊಂದಿದ್ದರು. ಕನ್ನಡ , ಮಲಯಾಳಂ , ಮರಾಠಿ, ಆಂಗ್ಲ , ಹಿಂದಿ , ಗುಜರಾತಿ , ಸಂಸ್ಕೃತ ಭಾಷೆಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು. ಸಂಸ್ಕೃತ ಭಾಷೆಯಲ್ಲಿ ಅಗಾಧ ಪಾಂಡಿತ್ಯವಿತ್ತು. ಪೌರಾಣಿಕ ಚಿತ್ರ ರಚಿಸುವ ಮೊದಲು ಅನೇಕ ಸಂಸ್ಕೃತ ಗ್ರಂಥಗಳ ಅಧ್ಯಯನದ ನಂತರ ಚಿತ್ರ ರಚಿಸಲು ಆರಂಭಿಸುತ್ತಿದ್ದರು. ಪಾವಂಜೆರಾಯರು ಕಾಗದದಿಂದ ಕಲಾಕೃತಿ ರಚಿಸುವುದರಲ್ಲಿ ಸಿದ್ಧಹಸ್ತರು. ತೆಂಗಿನ ನಾರು, ಗರಿ, ಮರ ಹಾಗೂ ಮಣ್ಣಿನಿಂದ ಅನೇಕ ಕಲಾಕೃತಿ ರಚಿಸುತ್ತಿದ್ದರು. ಈಗಲೂ ಕೆಲವು ಕಲಾಕೃತಿಗಳು ನೋಡಲು ಲಭ್ಯ. ಕೆನರಾ ಬ್ಯಾಂಕಿನ ಸ್ಥಾಪಕರಾದ ದಿ - ಅಮ್ಮೆಂಬಳ ಸುಬ್ಬರಾವ್ ಪೈ ಅವರ ಕೃತಿ ಸುರಕ್ಷಿತವಾಗಿ ರಾಯರ ಮೊಮ್ಮಕ್ಕಳ ಬಳಿ ಇದೆ.

ಪಾವಂಜೆ ಗೋಪಾಲಕೃಷ್ಣಯ್ಯರಿಗೆ ಅನೇಕ ಹವ್ಯಾಸಗಳಿದ್ದವು. ಸುಂದರವಾದ ಕಲ್ಲು - ಹರಳುಗಳ ಸಂಗ್ರಹ , ನಾಣ್ಯ-ಅಂಚೆ ಚೀಟಿ , ಬೆಂಕಿ ಪೊಟ್ಟಣಗಳ ಸಂಗ್ರಹಣೆ ಅತ್ಯಂತ ನೆಚ್ಚಿನ ಹವ್ಯಾಸವಾಗಿತ್ತು. ಅಮೂಲ್ಯವಾದ ಪುಸ್ತಕಗಳ ಸಂಗ್ರಹಣೆ ಅವುಗಳ ಅಧ್ಯಯನದ ನಂತರ ಅವುಗಳ ಬಗ್ಗೆ ತಮ್ಮ ಟಿಪ್ಪಣಿ ಬರೆದಿಡುತ್ತಿದ್ದರು. ಪುಸ್ತಕ ಅಧ್ಯಯನಕ್ಕೆ ಹೆಚ್ಚಿನ ಸಮಯ ಮೀಸಲಿಡುತ್ತಿದ್ದರು. ರಾಯರು ಅನೇಕ ಲೇಖನ ಪುಸ್ತಕಗಳನ್ನು ಬರೆದಿದ್ದಾರೆ. ಮುಖ್ಯವಾಗಿ ವಿದ್ಯಾರ್ಥಿಗಳಿಗಾಗಿ"ವಿಚಾರ ಸಂಹಿತೆ" ಬಾಸಲ್ ಮಿಶನ್ ನವರು ಮುದ್ರಿಸಿ ಪ್ರಕಟಿಸಿರುವ ಈ ಪುಸ್ತಕದಲ್ಲಿ ವಿದ್ಯಾರ್ಥಿಗಳಿಗೆ ನೀತಿ ಸಂಹಿತೆ ಮತ್ತು ಅವುಗಳ ಅವಶ್ಯಕತೆಯ ಬಗ್ಗೆ ವಿವರಿಸಿದ್ದಾರೆ."ಆಚಾರ ದರ್ಪಣ"-ಶಾರದ ಪ್ರೆಸ್ ನವರು ಮುದ್ರಿಸಿ ಪ್ರಕಟಿಸಿರುವ ಈ ಪುಸ್ತಕದಲ್ಲಿ 'ಬ್ರಹ್ಮಚರ್ಯ'ವೈಶಿಷ್ಟ್ಯದ ಬಗ್ಗೆ



ಭಾವಚಿತ್ರ

ಬರೆದಿದ್ದಾರೆ. "our past and present from a religious point of view" ಎಂಬ ಪುಸ್ತಕವನ್ನು ಕೆನರಾ ಶಾಲೆಯ ಹಿರಿಯ ವಿದ್ಯಾರ್ಥಿಗಳ ಸಂಘ ಪ್ರಕಟಿಸಿವೆ (೧೯೦೪). ಈ ಅಂಶವನ್ನು ಗಮನಿಸಿದಾಗ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವುದರಲ್ಲಿ ಹೆಚ್ಚಿನ ಉತ್ಸಾಹ ಅವರಲ್ಲಿತ್ತೆಂಬುದನ್ನು ತಿಳಿಯಬಹುದು. ಇವರ ಬಹುಮುಖ ಪ್ರತಿಭೆ ಉತ್ಸಾಹಗಳಿಂದಾಗಿ ಕೇವಲ ಚಿತ್ರಕಲೆಯ ಅಧ್ಯಾಪಕರಾಗಿದ್ದರೂ ಸಹ ಶಿಷ್ಯ ವೃಂದದಲ್ಲಿ ಖ್ಯಾತರಾಗಿದ್ದರು. ರಾಯರು ಸಂಗ್ರಹಿಸಿದ ಹರಳು , ಶಂಖಗಳು , ದಂತದ ಕೆತ್ತನೆಯ ಕಲಾಕೃತಿಗಳು , ಪುಸ್ತಕಗಳನ್ನು ಕೆನರಾ ಶಾಲೆಯ ವಸ್ತುಸಂಗ್ರಹಾಲಯಕ್ಕೆ ದಾನ ಮಾಡಿದ್ದಾರೆ. (ಆದರೆ ಈಗ ಆ ಶಾಲೆಯ ವಸ್ತು ಸಂಗ್ರಹಾಲಯ ಶೋಚನೀಯ ಸ್ಥಿತಿಯಲ್ಲಿರುವುದು ಬೇಸರದ ಸಂಗತಿ)

ಸಂಪ್ರದಾಯವಾದಿ - ವಿಚಾರವಾದಿ

ಪಾವಂಜೆ ಗೋಪಾಲಕೃಷ್ಣಯ್ಯ ಅವರಿಗೆ ಹಿಂದೂ ಸಂಪ್ರದಾಯಗಳಲ್ಲಿ ನಂಬಿಕೆ, ಮಹಾನ್ ದೈವ ಭಕ್ತರು. ನೂರಾರು ಉಪವಾಸ - ವ್ರತಗಳನ್ನು ಚಾಚೂ ತಪ್ಪದೆ ನೆರವೇರಿಸಿಕೊಂಡು ಬರುತ್ತಿದ್ದರು. ಮನೆತನದ ಪೂರ್ವಿಕರಿಂದ ಕಟ್ಟುನಿಟ್ಟಿನ ಆಚಾರ ವಿಚಾರಗಳನ್ನು ಚಾಚೂ ತಪ್ಪದೆ ಮುಂದುವರಿಸಿಕೊಂಡು ಬಂದವರು. ನಿತ್ಯವೂ ದೇವರ ಪೂಜೆ, ಪುರಸ್ಕಾರದ ನಂತರವೇ ಇತರೆ ಕೆಲಸ. ಬೊಂಬಾಯಿಯಂತಹ ನಗರದಲ್ಲಿದ್ದರೂ, ಪಾಶ್ಚಾತ್ಯ ಭಾಷಾ ಸುಳಿ ಅಲೆಯ ನಡುವಿದ್ದರೂ ಸಹ ಪಾಶ್ಚಿಮಾತ್ಯ ಸಂಸ್ಕೃತಿಗೆ ಮಾರು ಹೋಗಲಿಲ್ಲ. ಹಿಂದೂ ಧರ್ಮ ಭಾರತೀಯತೆಯ ಬಗ್ಗೆ ಅಪಾರ ನಂಬಿಕೆ. ಇವರಿಗೆ ಅನೇಕ ಸಾದು ಸಂತರ ಸಂಪರ್ಕವಿತ್ತು.

ಸ್ವಚ್ಛಂದ ಕಲೆ , ಹಸಿರು ವೃಕ್ಷ ಸಮೂಹದ ಪರಿಸರದ ನಡುವಿನಲ್ಲಿದ್ದ ಮಂಗಳೂರಿನ ಇವರ ಮನೆ ಉಡುಪಿ ಮಠಾಧಿಪತಿಗಳಿಗೆ, ಸನ್ಯಾಸಿಗಳಿಗೆ ತಂಗುದಾಣವಾಗಿತ್ತು. ವಿಷ್ಣು ಸಹಸ್ರನಾಮ ಸೇರಿದಂತೆ ಅನೇಕ ವಿಶೇಷ ಧಾರ್ಮಿಕ ಕಾರ್ಯಗಳು, ಪುನಸ್ಕಾರಗಳು ಇವರ ಮನೆಯಲ್ಲಿ ನೆರವೇರುತ್ತಿತ್ತು. ತಮ್ಮ ಶಿಸ್ತು ಧಾರ್ಮಿಕ ಕಟ್ಟು ಪಾಡುಗಳನ್ನು ಚಾಚೂ ತಪ್ಪದೇ ಕೊನೆಯುಸಿರೆಳೆಯುವವರೆಗೂ ನೆರವೇರಿಸಿಕೊಂಡು ಬಂದಿದ್ದಾರೆ.

ಶ್ರೀಗೋಪಾಲಕೃಷ್ಣಯ್ಯ ಅವರು ಸಂಪ್ರದಾಯವಾದಿಗಳಾದರೂ ವಿಶಾಲ ಮನೋಭಾವವುಳ್ಳವರಾಗಿದ್ದರು ಎಂಬುದು ಅವರ ವ್ಯಕ್ತಿತ್ವದ ಕಡೆ ಬೆಳಕು ಚೆಲ್ಲಿದಾಗ ಕಂಡುಬರುತ್ತದೆ. ಎಲ್ಲಾ ಮತಸ್ಥರನ್ನು ಒಂದೇ ಮನೋಭಾವದಿಂದ ಕಾಣುತ್ತಿದ್ದರು. ಜನರಲ್ಲಿ ಭೇದಭಾವ ಅವರಿಗಿರಲಿಲ್ಲ. ಪರಮತಸ್ಥರ ಒಡನಾಟವಿತ್ತು. ಎಲ್ಲರ ಪ್ರೀತಿ ವಾತ್ಸಲ್ಯ ಸಂಪಾದಿಸಿದ್ದರು. ಅನೇಕ ಹಿಂದುಳಿದ ಹರಿಜನ ಜನಾಂಗದ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯ ನೀಡಿ ಅವರ ವಿದ್ಯಾಭ್ಯಾಸಕ್ಕೆ ಸಹಾಯ ಕಲ್ಪಿಸಿದ್ದು ಹಾಗೂ ಚಿತ್ರಕಲೆ ಬೋಧಿಸಿದ ಬಗ್ಗೆ ಅನೇಕ ಉದಾಹರಣೆ, ಘಟನೆಗಳು ಇವರ ದಿನಚರಿ ಪುಸ್ತಕಗಳಲ್ಲಿ ಲಭ್ಯ.

ಇವರು ಜೀವಿತ ಕಾಲದಲ್ಲಿ ಬ್ರಾಹ್ಮಣ ಮತಸ್ಥರು. ಯಕ್ಷಗಾನ ನೋಡುವುದಾಗಲಿ, ಯಕ್ಷಗಾನದಲ್ಲಿ ಅಭಿನಯಿಸುವುದಾಗಲಿ ನಿಷೇಧವಿದ್ದ ಕಾಲ. ಕಲೆಯ ಬಗ್ಗೆ ಅತೀವ ಭಕ್ತಿ ಗೌರವ ಹೊಂದಿದ್ದ ಪಾವಂಜೆಯವರಿಗೆ 'ಯಕ್ಷಗಾನ' ಕಲೆಯಾಗಿ ಕಂಡಿತು. ಯಕ್ಷಗಾನದ ಆಟಗಳನ್ನು ನೋಡುತ್ತಿದ್ದರು. ಯಕ್ಷಗಾನಮೇಳದಲ್ಲಿ ವೇಷ ಹಾಕಿ ಅಭಿನಯಿಸುತ್ತಿದ್ದರು. ಅವರ ಹಿರಿಯ ಮಗ ದಿ||ಎನ್. ಜಿ.

ಪಾವಂಜೆಯವರಿಗೆ ಮೈಸೂರು ಸಂಸ್ಥಾನದ ಅರಸರ ವಿದ್ಯಾರ್ಥಿವೇತನ ದೊರೆತು ವಿದೇಶದಲ್ಲಿ ಉನ್ನತ ಕಲಾ ಶಿಕ್ಷಣ ಪಡೆಯಲು ಅವಕಾಶ ದೊರೆತಾಗ ರಾಯರು ಸಂಪೂರ್ಣ ಒಪ್ಪಿಗೆ ನೀಡಿ ಸಂತೋಷದಿಂದ ಆಶೀರ್ವದಿಸಿದರು. ಆ ವೇಳೆಯಲ್ಲಿ ಸಮುದ್ರ ಪಯಣ ನಿಷಿದ್ಧವಾಗಿತ್ತು.(ದಿ||ಎನ್. ಜಿ.ಪಾವಂಜೆಯವರು ಸ್ವದೇಶಕ್ಕೆ ಮರಳಿದಮೇಲೆ ಮೈಸೂರಿನ ಚಾಮರಾಜೇಂದ್ರ ತಾಂತ್ರಿಕ ಶಾಲೆಯ ಮುಖ್ಯಸ್ಥರಾಗಿ ಸೇವೆಸಲ್ಲಿಸಿದರು) ಇವೆಲ್ಲಾ ಘಟನೆಗಳನ್ನು ಗಮನಿಸಿದಾಗ ಪಾವಂಜೆ ಗೋಪಾಲಕೃಷ್ಣಯ್ಯನವರು ಸಂಪ್ರದಾಯವಾದಿ ದೈವಭಕ್ತರಾಗಿದ್ದರು ಕೂಡಾ ವಿಚಾರವಂತರು ಹಾಗೂ ವಿಶಾಲ ಮನೋಭಾವ ಹೊಂದಿದವರಾಗಿದ್ದರೆಂಬುದನ್ನು ತಿಳಿಯಬಹುದು. ಪ್ರತಿಯೊಂದು ಸಂದರ್ಭವನ್ನು ಅವಲೋಕಿಸುವಂತಹ ಸಹನೆ , ಸಾಮರ್ಥ್ಯ, ಪರಿಜ್ಞಾನ ಅವರಿಗಿತ್ತು.

ಪರರ ಸಂಪತ್ತಿಗೆ , ವಸ್ತುವಿಗೆ ಆಸೆ ಪಡಬಾರದೆಂಬುದು ಇವರ ನೀತಿಯಾಗಿತ್ತು. ನ್ಯಾಯದಿಂದ ದುಡಿದು ಹಣ ಸಂಪಾದಿಸಬೇಕೆಂಬುದು ಅವರ ನಿಲುವು. ಪರರನ್ನು ದ್ವೇಶಿಸುವ, ದೂಷಿಸುವ ಸ್ವಭಾವ ರಾಯರ ಬಳಿಯಿರಲಿಲ್ಲ. ತಮ್ಮ ಮೊಮ್ಮಕ್ಕಳಿಗೂ ಹಾಗೂ ಶಿಷ್ಯರಿಗೂ ಕತೆಯ ರೂಪದಲ್ಲಿ ಈ ನೀತಿ ಮಾತುಗಳನ್ನು ಬೋಧಿಸುತ್ತಿದ್ದರು. ಜೀವನದಲ್ಲಿ ನ್ಯಾಯ, ಧರ್ಮ, ಪ್ರಾಮಾಣಿಕತೆಗೆ ಹೆಸರು ವಾಸಿಯಾಗಿದ್ದ ಗೋಪಾಲಕೃಷ್ಣಯ್ಯನವರು ಕಷ್ಟದಲ್ಲಿರುವವರಿಗೆ ಯಾವುದೇ ಸಮಯದಲ್ಲಿಯಾದರೂ ಸಹಾಯ ಮಾಡಲು ಹಿಂಜರಿಯುತ್ತಿರಲಿಲ್ಲ. ನ್ಯಾಯಯುತವಾದ ಸಲಹೆ , ಮಾರ್ಗದರ್ಶನ ಸಮಸ್ಯೆಗಳಿಗೆ ಪರಿಹಾರ

ಕೇಳಿಕೊಂಡು ರಾಯರ ಬಳಿಗೆ ಅನೇಕ ಜನರು ಬರುತ್ತಿದ್ದರು.

ಸ್ವಾತಂತ್ರ ಪ್ರೇಮಿಗಳಾಗಿದ್ದ ಪಾವಂಜೆ ರಾಯರು ಅನೇಕ ಸ್ವಾತಂತ್ರ್ಯದ ಪರವಾದ ಪತ್ರಿಕೆಗಳ ಚಂದಾದಾರರಾಗಿದ್ದರು. ಆದ ಕಾರಣ ಪೋಲೀಸರು ಇವರ ಮನೆಯ ಶೋಧನೆ ನಡೆಸಿದ್ದರಂತೆ. ಮತ್ತೊಮ್ಮೆ ಮಂಗಳೂರಿನ ಕಲಾವಿದರೊಬ್ಬರು ಕಳ್ಳ ನೋಟಿಗೆ ಬೇಕಾದ ಕಲಾಕೃತಿಗಳನ್ನು ರಚಿಸಿಕೊಟ್ಟಿದ್ದರೆಂಬ ಸುದ್ಧಿಯ ಹಿನ್ನೆಲೆಯಲ್ಲಿ ಇವರ ಮನೆಯು ಶೋಧನೆಯಾಗಿತ್ತು. ಇದಕ್ಕೆ ಮುಖ್ಯ ಕಾರಣ ಅಂದು ಮಂಗಳೂರಿನಲ್ಲಿದ್ದ ಏಕೈಕ ಚಿತ್ರಕಲಾ ಕೇಂದ್ರ "ಪಾವಂಜೆ ಆರ್ಟ್‌ಸ್ಟುಡಿಯೋ "ನುರಿತ ಕಲಾವಿದ ಪಾವಂಜೆ ಗೋಪಾಲಕೃಷ್ಣರಾಯರು. ಪೋಲಿಸರು ಸಂಶಯದಿಂದ ಮನೆಗೆಬಂದಾಗ 'ಸಂಶಯ ಸುಳಿಯನ್ನು ನಿವಾರಿಸಿಕೊಳ್ಳಿ ಎಂದು ಒಳಕರೆದು ತೋರಿಸಿದ್ದರಂತೆ. ಅನುಮಾನ ಬೇಡ ದೇವರ ಮನೆಯನ್ನು ನೋಡಿ ಬಿಡಿ 'ಎಂದು ದೇವರ ಮನೆಯನ್ನು ತೋರಿಸಿ ಪೋಲಿಸರಿಗೆ ಸಂಶಯ ದೂರವಾಗಿಸಿದ್ದರು. (ಕೆಲವು ದಿನಗಳ ನಂತರ ಜಾಲದಲ್ಲಿ ನಿರತರಾಗಿದ್ದ ಬೇರೆ ಕಲಾವಿದರೊಬ್ಬರನ್ನು ಬಂಧಿಸಲಾಯಿತು) ಈ ಒಂದು ಘಟನೆಯ ಮೂಲಕ ರಾಯರಲ್ಲಿ ಮುಚ್ಚುಮರೆಯಿರಲಿಲ್ಲ. ಸಂಶಯದಿಂದ ಬಂದ ಜನರನ್ನು ಸಹ ಗೌರವದಿಂದ ಕಂಡು ಸ್ವಾಗತಿಸಿ ನಿಜ ವಿಷಯ ಸ್ವತಃ ಅರಿಯಲು ಅವಕಾಶ ನೀಡುತ್ತಿದ್ದರೆಂಬುದನ್ನು ತಿಳಿಯಬಹುದು.

ದೇಶ ವಿದೇಶದ ಅನೇಕ ಕಲಾವಿದರು ಶ್ರೀಗೋಪಾಲಕೃಷ್ಣಯ್ಯ ಅವರನ್ನು ಭೇಟಿಯಾಗಲು ಇವರ ಮಂಗಳೂರಿನ ಪಾವಂಜೆ ಮನೆಗೆ ಬರುತ್ತಿದ್ದುದುಂಟು. ಪರಸ್ಥಳದಿಂದ ಬಂದ ಸ್ವಾತಂತ್ರ್ಯ ಹೋರಾಟಗಾರರಿಗೆ, ಯಾತ್ರಿಗಳಿಗೆ ಇವರ ಮನೆ ತಂಗುದಾಣವಾಗಿತ್ತು. ಈ ವಿಷಯ

ಅವಲೋಕಿಸಿದಾಗ ಪಾವಂಜೆರಾಯರು ಕೇವಲ ಕಲಾವಿದರಾಗಿರಲಿಲ್ಲ. ಸಮಾಜದಲ್ಲಿ ಬಹು ಜನರ ಪ್ರೀತಿ ಮೆಚ್ಚುಗೆ ಗಳಿಸಿದ ಮಹಾನ್ ವ್ಯಕ್ತಿಯಾಗಿದ್ದರೆಂಬ ವಿಚಾರ ಖಚಿತವಾಗುತ್ತದೆ.

ಸಾಂಸಾರಿಕ ಜೀವನ :

ರಾಯರು ತುಂಬು ಸಾಂಸಾರಿಕ ಜೀವನ ನಡೆಸಿದರು. ರಾಯರು ಜೂನ್ 10, 1886ರಲ್ಲಿ ವೈವಾಹಿಕ ಜೀವನಕ್ಕೆ ಕಾಲಿರಿಸಿದರು. ಧರ್ಮಪತ್ನಿ ಶ್ರೀಮತಿ ವೆಂಕಮ್ಮ. ದಂಪತಿಗಳಿಗೆ ಮೂರು ಗಂಡು ಮಕ್ಕಳು - ದಿ|ಎನ್.ಜ.ಪಾವಂಜೆ, ದಿ|ಎನ್.ಜಿ. ಪಾವಂಜೆ ಭುಜಂಗ ರಾಯರು, ಶ್ರೀಮುರಾರಿ ಪಾವಂಜೆ (ಈಗ ಮುಂಬೈಯಲ್ಲಿ ನೆಲೆಸಿದ್ದಾರೆ) ಇಬ್ಬರು ಹೆಣ್ಣು ಮಕ್ಕಳು -ದಿ|ತುಳಸಿ ಹಾಗೂ ದಿ|ಶಾರದ.

ಗೋಪಾಲಕೃಷ್ಣಯ್ಯರ ಹಿರಿಯ ಮಗ ದಿ| ಎನ್. ಜಿ. ಪಾವಂಜೆ (ನರಹರಿ ಪಾವಂಜೆ) ಜೆ. ಜೆ.ಕಲಾಶಾಲೆ ಹಾಗೂ ಜರ್ಮನಿ ದೇಶದಲ್ಲಿ ಕಲಾ ಶಿಕ್ಷಣ ಪಡೆದ ನಂತರ ಮೈಸೂರಿನ ಚಾಮರಾಜ ತಾಂತ್ರಿಕ ಶಾಲೆಯಲ್ಲಿ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿ ನಿವೃತ್ತರಾದವರು. ಕರ್ನಾಟಕದ ಕಲಾ ಇತಿಹಾಸದಲ್ಲಿ ಅಪಾರ ಸೇವೆ ಸಲ್ಲಿಸಿದ ಕಲಾವಿದರಲ್ಲೊಬ್ಬರು. ದಿ. ಪಾವಂಜೆ ಭುಜಂಗರಾಯರು ಸಹ ಕಲಾವಿದರು. ಕೆನರಾ ಶಾಲೆಯಲ್ಲಿ ಕಲಾಶಿಕ್ಷಕರಾಗಿ ನಿವೃತ್ತರಾದವರು. ಅವರು ಕೇವಲ ಕಲೆಯೊಂದೇ ಅಲ್ಲದೆ ಆಂಗ್ಲ ಭಾಷೆ ಹಾಗು ಇತಿಹಾಸ ವಿಷಯಗಳನ್ನು ಬೋಧಿಸುತ್ತಿದ್ದಾರು. ರಾಯರ ನಂತರ ಪಾವಂಜೆ ಸ್ಟುಡಿಯೋ ಮುಂದುವರಿಸಿಕೊಂಡು ಬಂದವರು. ಶ್ರೀಭುಜಂಗರಾಯರು. ಮುರಾರಿ ಪಾವಂಜೆಯವರೂ ಕಲೆಯನ್ನು

ಹವ್ಯಾಸವಾಗಿಟ್ಟುಕೊಂಡು ಬ್ರಿಟಿಷ್ ಕಂಪನಿಯೊಂದರಲ್ಲಿ ಸೇವೆ ಸಲ್ಲಿಸಿ
ಈಗ ವಿವೃತ್ತಿಯ ನಂತರ ಬೊಂಬಾಯಿಯಲ್ಲಿ ನೆಲೆಸಿರುತ್ತಾರೆ (ಅವರಿಗೀ
ತೊಂಭತ್ತೈದು ವರ್ಷಗಳು).

ಕಲಾಸಾಧನೆ - ಕೊಡುಗೆಗಳು

ಹಸಿರು ಭೂ ಸಿರಿಯ ವೈಭವದ ನಡುವೆ ಜನ್ಮ ತಾಳಿದ ಪಾವಂಜ
ಗೋಪಾಲಕೃಷ್ಣರಾಯರು ಬಾಲ್ಯದಲ್ಲಿಯೇ ಕಲಾ ಸಾಧನೆಗೆ ತೊಡಗಿದ್ದರು
ಸುತ್ತ ಮುತ್ತಲಿನ ಸುಂದರ ಭೂ ಶಿಖರಗಳು, ನದಿ ತೊರೆಗಳು
ಭೋರ್ಗರೆಯುವ ಕಡಲ ತೀರ, ಚಿತ್ರಕಲೆಗೆ ತೊಡಗಲು ಪ್ರೇರಣೆಯಾಗಿದ
ಎಂದರೆ ತಪ್ಪಾಗಲಾರದು. ಉತ್ತಮ ಪ್ರಕೃತಿ ಪರಿಸರದ ನಡುವಿನ ಒಡನಾಟ
ಚಿತ್ರಕಲೆಯಲ್ಲಿ ಮುಂದುವರಿಕೆಗೆ ತಂದೆಯ ಪ್ರೋತ್ಸಾಹ, ಪ್ರಿನ್ಸಿಪಾಲರ
ಮಾರ್ಗದರ್ಶನ, ಸರ್।ಪಿ.ಆರ್ ರಾವ್ ಅವರ ಉತ್ತೇಜನ, ಜೊತೆಗ
ರಾಯರ ನಿರಂತರ ಅಭ್ಯಾಸದಿಂದಾಗಿ ರಾಯರು ಕಲಾಕ್ಷೇತ್ರಕ್ಕೆ ಅದ್ವಿತೀಯ
ಕಾಣಿಕೆ ನೀಡಲು ಸಾಧ್ಯವಾಯಿತು. ಇವರ ಕಲಾಕೃತಿಗಳು ಅವರಲ್ಲಿದ್ದ
ಕಲಾ ಪ್ರೌಢಿಮೆ, ಕಲಾ ಏಕಾಗ್ರತೆಗಳಿಗೆ ಸಾಕ್ಷಿಯಾಗಿದೆ.

ಪಾವಂಜೆ ರಾಯರು ಹುಟ್ಟಿದ್ದು ಕರ್ನಾಟಕದಲ್ಲಾದರೂ ಸುಮಾರ
ಹದಿನೈದು ವರ್ಷಗಳ ಕಾಲ ಮುಂಬೈಯಲ್ಲಿದ್ದ ಕಾರಣ ಇವರ ಕಲಾಕೃತಿಗಳ
ಮಹಾರಾಷ್ಟ್ರದ ವಿವಿಧ ಪ್ರದೇಶದಲ್ಲಿ ಹರಡಿಕೊಂಡಿದೆ. ಇವರು ರಚಿಸಿ
ಬಹುಪಾಲು ಕಲಾಕೃತಿಗಳು ದೇಶದ ನಾನಾ ಭಾಗಗಳಲ್ಲಿ ಹಂಚಿ ಹೋಗಿವ
ಸುಮಾರು ನೂರು ವರುಷಗಳ ಹಿಂದೆ ರಚಿಸಿದ ಕಲಾಕೃತಿಗಳ ಬಗ
ನಿರ್ದಿಷ್ಟ ಮಾಹಿತಿ ಲಭ್ಯವಿಲ್ಲ.

ಮಂಗಳೂರಿಗೆ ಬಂದು ನೆಲೆಸಿದ ನಂತರ ತಮ್ಮ ಮನೆಯಲ್ಲಿಯೇ 'ಪಾವಂಜೆ ಆರ್ಟ್ ಸ್ಟುಡಿಯೋ'ಆರಂಭಿಸಿದ್ದರು. ಈಗಲೂ ಈ ಸ್ಟುಡಿಯೋ ಅಸ್ತಿತ್ವದಲ್ಲಿದ್ದು ರಾಯರ ಮೊಮ್ಮಕ್ಕಳು ನಡೆಸಿಕೊಂಡು ಬರುತ್ತಿದ್ದಾರೆ. ಪಾವಂಜೆ ಮನೆಯ ಮೊದಲನೆ ಮಹಡಿಯಲ್ಲಿ ಗೋಪಾಲಕೃಷ್ಣಯ್ಯ ಅವರ ಕಲಾಕೃತಿಗಳೊಂದಿಗೆ ಎನ್.ಜಿ. ಪಾವಂಜೆ ಹಾಗೂ ಭುಜಂಗರಾಯರ ಕಲಾಕೃತಿಗಳನ್ನೂ ನೋಡಬಹುದು. ರಾಯರ ಮೊಮ್ಮಕ್ಕಳಾದ ಕಲಾವಿದ ಎಮ್.ಆರ್. ಪಾವಂಜೆ, ಪಿ.ಕೆ. ಮೂರ್ತಿ ಅವರುಗಳು ಸಂಗ್ರಹಿಸಿ ಸಂರಕ್ಷಿಸಿಕೊಂಡು ಬಂದಿರುವ ಅನೇಕ ಕಲಾಕೃತಿ ಹಾಗೂ ಮಾಹಿತಿಗಳ ಪ್ರಕಾರ ರಾಯರ ಕಲಾಕೃತಿಗಳನ್ನು ಈ ಕೆಳಗಿನಂತೆ ವಿಂಗಡಿಸಬಹುದು. ದೇವರ ಹಾಗೂ ಪುರಾಣದ ಹಿನ್ನಲೆಯ ಚಿತ್ರಗಳು, ವ್ಯಕ್ತಿ ಹಾಗೂ ಭಾವ ಚಿತ್ರಗಳು, ಸ್ಥಿರ ಚಿತ್ರಗಳು (ಸ್ಟಿಲ್ ಲೈಫ್) ತೈಲವರ್ಣ ಹಾಗೂ ರೇಖಾ ಚಿತ್ರಗಳು, ಮಣ್ಣಿನ ಕಲಾ ಕೃತಿಗಳು, ಪರಿಸರ ಚಿತ್ರಗಳು (ಲ್ಯಾಂಡ್ ಸ್ಕೇಪ್) ಇತ್ಯಾದಿ. ಈ ಕಲಾಕೃತಿಗಳನ್ನು ಗಮನಿಸಿದಾಗ ಪ್ರತಿಯೊಂದು ಕಲಾಕೃತಿಗಳನ್ನು ತಮ್ಮದೇ ಆದ ಕಲಾಶೈಲಿಯಲ್ಲಿ ಚಿತ್ರಿಸಿದ್ದಾರೆ.

ರಾಯರು ರಚಿಸಿರುವ ದೇವರ ಹಾಗೂ ಪೌರಾಣಿಕ ಹಿನ್ನಲೆಯ ಕಲಾಚಿತ್ರಗಳು ಅತ್ಯಂತ ಅರ್ಥಪೂರ್ಣವಾಗಿ ಕಲಾ ಗಾಂಭಿರ್ಯದಿಂದ ಕೂಡಿದೆ. ಬಹುಶ:ಇದಕ್ಕೆ ಮುಖ್ಯ ಕಾರಣ ರಾಯರು ಸ್ವತ: ದೈವಭಕ್ತರಾಗಿದ್ದುದು. ರಾಯರು ದೇವರ ಹಾಗೂ ಪೌರಾಣಿಕ ಚಿತ್ರಗಳನ್ನು ರಚಿಸುವ ಮೊದಲು ಸಂಸ್ಕೃತ ಗ್ರಂಥಗಳಿಂದ ಶ್ಲೋಕದಲ್ಲಿನ ವಿಶ್ಲೇಷಣೆ, ವ್ಯಾಖ್ಯಾನದ ಪ್ರತಿ ಅಂಶಗಳನ್ನು ರಾಯರು ಚಿತ್ರದಲ್ಲಿ ಪ್ರತಿಬಿಂಬಿಸುತ್ತಿದ್ದರು. ಇಂತಹ ಚಿತ್ರಗಳನ್ನು ರಚಿಸುವಲ್ಲಿ ರಾಯರಿಗೆ ಅವರ ಆಪ್ತ ಸ್ನೇಹಿತರಾದ

ಭಾರತೀಯ ಚಿತ್ರಕಲಾಕೋವಿದನೆನಿಸಿಕೊಂಡ ರಾಜಾ ರವಿವರ್ಮರ ಪ್ರಭಾವವಿರಬಹುದು.

ಭಾವಚಿತ್ರ ರಚಿಸುವುದರಲ್ಲಿ ರಾಯರು ಸಿದ್ಧಹಸ್ತರು. ತಮ್ಮ ಕಲಾ ಕುಂಚದಿಂದ ಅತಿ ನೈಜವಾಗಿ ವ್ಯಕ್ತಿಗಳ ಭಾವಚಿತ್ರ ರಚಿಸಿರುವುದನ್ನು ಗಮನಿಸಬಹುದು. ದಟ್ಟವಾದ ಹಸಿರು ಬಣ್ಣದ ಹಿನ್ನೆಲೆಯಲ್ಲಿ ರಚಿಸಲಾಗಿರುವ ಚಿತ್ರಗಳಲ್ಲಿ ಕಡು ಬಿಳಿ ಬಣ್ಣ ಬಳಸಿರುವ ಅಂಶ ಗಮನಿಸಬಹುದು. ಚಿತ್ರದ ಸಂಪೂರ್ಣತೆಗೆ ಕಾರಣ ಅತಿ ನೈಜವಾಗಿ ಚಿತ್ರಿತಗೊಂಡಿರುವ ವ್ಯಕ್ತಿಯ ಕಣ್ಣು. ಇದರಿಂದ ಸಂಪೂರ್ಣ ಕಲಾಕೃತಿ ಜೀವಕಳೆ ತುಂಬಿರಲು ಕಾರಣವಾಗಿದೆ. ರಾಯರು ರಚಿಸಿದ ಅನೇಕ ಭಾವಚಿತ್ರಗಳು ಮಂಗಳೂರಿನ ಕೆನರಾ ಹೈಸ್ಕೂಲ್ ಹಾಗು ಮಂಗಳೂರಿನಲ್ಲಿರುವ ಬಂಟರ ವಿದ್ಯಾರ್ಥಿನಿಲಯದಲ್ಲಿದೆ. ಶ್ರೀಗೋಪಾಲಕೃಷ್ಣಯ್ಯ ಅವರು ರಚಿಸಿದ ಕೆನರಾ ಬ್ಯಾಂಕಿನ ಸ್ಥಾಪಕರಾದ ದಿ| ಅಮ್ಮೆಂಬಳ ಸುಬ್ಬರಾವ್ ಪೈಯವರ ಚಿತ್ರ ಬೆಂಗಳೂರಿನ ಕೆನರಾ ಬ್ಯಾಂಕಿನ ಪ್ರಧಾನ ಕಚೇರಿಯಲ್ಲಿದೆ. ಅನೇಕ ರಾಜ ಮಹಾರಾಜರ ಭಾವಚಿತ್ರಗಳನ್ನು ರಚಿಸಿರುವ ಬಗ್ಗೆ ಮಾಹಿತಿ ರಾಯರ ಸಂಗ್ರಹದಲ್ಲಿರುವ ಪತ್ರಗಳಿಂದ ತಿಳಿಯಬಹುದು. ಉದಾಹರಣೆಗೆ ಮಧ್ಯಪ್ರದೇಶದ ಮಹಾರಾಜ ರಾಣಾ ಪನ್ನಾನ ಆಳೆತ್ತರದ ಚಿತ್ರ ರಚಿಸಿ ಕಳುಹಿಸಿದ ಬಗ್ಗೆ ಮಾಹಿತಿ ಇದೆ. ಆಗಿನ ಕಾಲದಲ್ಲಿಯೇ ಆ ಕಲಾಕೃತಿ ರಚಿಸಿದ್ದಕ್ಕೆ ರೂಪಾಯಿ ನಾಲ್ಕುನೂರು ಸಂಭಾವನೆ ದೊರೆತಿದೆ.

ಪಾವಂಜೆ ಗೋಪಾಲಕೃಷ್ಣಯ್ಯ ಅವರು ಜಲವರ್ಣ ಮಾಧ್ಯಮದಲ್ಲಿ ಸಿದ್ಧಹಸ್ತರು. ನೂರು ವರ್ಷಗಳ ಹಿಂದೆ ರಾಯರು ರಚಿಸಿದ ಜಲವರ್ಣ

ಕಲಾಕೃತಿಗಳು ಈಗಲೂ ಉತ್ತಮ ಸ್ಥಿತಿಯಲ್ಲಿದೆ. ಇವರ ಜಲವರ್ಣ ಕಲಾಕೃತಿಗಳನ್ನು ಗಮನಿಸಿದಾಗ ರಾಯರಿಗೆ ಜಲವರ್ಣ ಮಾಧ್ಯಮದ ಮೇಲಿದ್ದ ಕಲಾ ಹಿಡಿತ, ಬಣ್ಣಗಳ ಸಂಯೋಜನೆಯ ಜ್ಞಾನ, ಅತಿ ಕ್ಷಿಪ್ರ ಗತಿಯ ಕುಂಚದ ಚಲನೆ ಇತ್ಯಾದಿ ಅನೇಕ ಅಂಶಗಳನ್ನು ಗಮನಿಸಬಹುದು. ಅತ್ಯಂತ ಪರಿಪೂರ್ಣವಾಗಿ ವಸ್ತುವಿನ ಪೂರ್ಣ ಭಂಗಿಯನ್ನು ಚಿತ್ರದಲ್ಲಿ ಕಾಣಬಹುದು. ಜಲವರ್ಣದಲ್ಲಿ ಮಿನಿಯೇಚರ್ ಶೈಲಿಯನ್ನು ಹೋಲುವ ಅನೇಕ ಚಿತ್ರಗಳನ್ನು ರಚಿಸಿರುತ್ತಾರೆ.

ರಾಯರ ಕಲಾಕೃತಿಗಳನ್ನು ಅವಲೋಕಿಸಿದಾಗ ರಾಯರಿಗಿದ್ದ ವಸ್ತುಗಳ ಪರಿಕಲ್ಪನೆ ಊಹಿಸಲು ಅಸಾಧ್ಯ. ನೂರಕ್ಕೆ ನೂರರಷ್ಟು ಪರಿಪೂರ್ಣವಾದ ಚಿತ್ರವನ್ನು ಕ್ಯಾನ್‌ವಾಸ್ ಅಥವಾ ಬಿಳಿಯ ಹಾಳೆಯ ಮೇಲೆ ನೈಜವಾಗಿ ಚಿತ್ರಸುವಂತಹ ಸಾಮರ್ಥ್ಯ ಅವರಲ್ಲಿತ್ತು ಎಂಬುದನ್ನು ಅರಿಯಬಹುದು. ಇದಕ್ಕೆ ಮುಖ್ಯ ಕಾರಣ ರಾಯರಲ್ಲಿದ್ದ ಕಲಾವರ್ಣಗಳ ಪರಿಜ್ಞಾನ , ನಿರಂತರ ಅಭ್ಯಾಸ , ಕಲಾನಿಷ್ಠೆ ಹಾಗೂ ಗರಿಷ್ಠ ಪ್ರಮಾಣದ ಕಾಲ ಏಕಾಗ್ರತೆ.

ಗೋಪಾಲಕೃಷ್ಣಯ್ಯ ಅವರು ದೇಶದ ನಾನಾ ಪ್ರದೇಶಗಳಿಗೆ ಭೇಟಿ ನೀಡಿದ ಸಮಯದಲ್ಲಿ ತಾವು ಕಂಡು ಆನಂದಿಸಿದ ಅನೇಕ ದೃಶ್ಯಗಳನ್ನು ತಮ್ಮ ಕಲಾರೇಖೆಗಳಿಂದ ದಾಖಲಿಸಿದ್ದಾರೆ. ದೆಹಲಿ, ಆಗ್ರಾ, ಹೈದರಾಬಾದ್ ಮುಂತಾದ ನಗರದ ಅನೇಕ ರೇಖಾಚಿತ್ರಗಳಿವೆ. ದೈನಂದಿನ ಬದುಕಿನಲ್ಲಿ ಶ್ರೀಸಾಮಾನ್ಯರ ವಿವಿಧ ಭಂಗಿಗಳು , ವಿಶೇಷ ಸಮಾರಂಭಗಳಲ್ಲಿ ಅತಿಥಿ ಸತ್ಕಾರ, ವಿವಿಧ ಶೈಲಿ-ವೇಷದ ಭಿಕ್ಷುಕರು, ಚಮ್ಮಾರ, ಬಡಿಗ, ಕಮ್ಮಾರ, ಹಾಗೂ ವೈದಿಕ ವ್ಯಕ್ತಿಗಳ ರೇಖಾ ಚಿತ್ರಗಳನ್ನು ರಚಿಸಿದ್ದಾರೆ. ತಾವು ಕಂಡ

ಸಮಾಜದಲ್ಲಿನ ಜನಜೀವನ , ಜನರ ಉಡುಗೆ ತೊಡುಗೆಯಲ್ಲಿನ ವ್ಯತ್ಯಾಸ ಅಂದರೆ ಸಾಮಾಜಿಕ ಬದಲಾವಣೆ ಪ್ರತಿಬಿಂಬಿಸುವತಹ ಅನೇಕ ರೇಖಾ ಚಿತ್ರಗಳನ್ನು ರಚಿಸಿದ್ದಾರೆ. ಈ ಎಲ್ಲಾ ರೇಖಾಚಿತ್ರಗಳನ್ನು ಗಮನಿಸಿದಾಗ, ದೃಶ್ಯಗಳನ್ನು ಸರಳವಾಗಿ ರೇಖೆಗಳಲ್ಲಿ ಸರಳ ರೇಖೆಗಳಲ್ಲಿ ಸೆರೆಹಿಡಿಯುವ ಕಲಾಹಿಡಿತ ಅವರಲ್ಲಿತ್ತು ಎಂಬುದನ್ನು ತಿಳಿಯಬಹುದು. ಪ್ರತಿಯೊಂದು ರೇಖಾಚಿತ್ರಗಳು ಅವರ ಕಲಾ ಪ್ರೌಢಿಮೆಗೆ ಸಾಕ್ಷಿಯಾಗಿದೆ. ಪಾವಂಜೆ ಗೋಪಾಲಕೃಷ್ಣಯ್ಯ ಅವರು ಅನೇಕ ಪುಸ್ತಕಗಳ ಮುಖ ಪುಟಗಳನ್ನು ವಿನ್ಯಾಸಿಸಿದ್ದಾರೆ. ಬಾಸೆಲ್ ಮಿಶನ್‌ನವರು ಮುದ್ರಿಸಿ ಪ್ರಕಟಿಸಿದ ಅನೇಕ ಪುಸ್ತಕಗಳಲ್ಲಿ ರಾಯರು ರಚಿಸಿದ ಚಿತ್ರಗಳಿವೆ. ವಿಜ್ಞಾನದ ವಿಷಯಕ್ಕೆ ಸಂಬಂಧಿಸಿದ ಹಲವಾರು ಶೈಕ್ಷಣಿಕ ಪಠ್ಯಪುಟಗಳನ್ನು ರಾಯರು ಬಾಸೆಲ್ ಮಿಶನ್‌ಗಾಗಿ ಚಿತ್ರಿಸಿ ಕೊಟ್ಟಿದ್ದಾರೆ. ಅಂದು ಮುದ್ರಣಗೊಂಡು ಪ್ರಕಟಗೊಂಡ ಪಟ (ಚಾರ್ಟ್)ಗಳು ಈಗಲೂ ರಾಯರ ಮೊಮ್ಮಕ್ಕಳ ಸಂಗ್ರಹದಲ್ಲಿದೆ.

ಧರ್ಮಸ್ಥಳ ಮಂಜುನಾಥ ದೇವಾಲಯ, ಉಡುಪಿ ಶ್ರೀಕೃಷ್ಣ ದೇವಾಲಯ , ಕುಕ್ಕೆ ಸುಬ್ರಹ್ಮಣ್ಯ ದೇವಾಲಯದ ಲಾಂಛನಗಳನ್ನು ರಚಿಸಿದವರು ಪಾವಂಜೆ ಗೋಪಾಲಕೃಷ್ಣಯ್ಯನವರು. ಹುಬ್ಬಳ್ಳಿಯ ಸಿದ್ಧಾರೂಢ ಮಠವೂ ಸೇರಿದಂತೆ ಅನೇಕ ದೇವಸ್ಥಾನಗಳಿಗೆ ಕಲಾಕೃತಿಗಳನ್ನು ರಚಿಸಿಕೊಟ್ಟ ಮಾಹಿತಿಗಳಿವೆ. ಆದರೆ ಆ ಕಲಾಕೃತಿಗಳ ಈಗಿನ ಸ್ಥಿತಿಗತಿಗಳ ಬಗ್ಗೆ ಮಾಹಿತಿ ಲಭ್ಯವಿಲ್ಲ.

ಅಂದು ಗೋಪಾಲಕೃಷ್ಣಯ್ಯ ಅವರು ರಚಿಸಿದ ಕಲಾಕೃತಿಗಳು ದೇಶದಲ್ಲಿ ಜರುಗುತ್ತಿದ್ದ ಅನೇಕ ಕಲಾ ಪ್ರದರ್ಶನದಲ್ಲಿ ಪ್ರದರ್ಶನಗೊಂಡು ಪ್ರಶಸ್ತಿ

ಲಭಿಸಿದೆ. ಅಂದು ದೊರೆತ ಅನೇಕ ಪ್ರಶಸ್ತಿ ಪದಕಗಳು ಇಂದಿಲ್ಲ. ರೇಷನ್ ಕಾಲದಲ್ಲಿ ಆರ್ಥಿಕ ಸಂಕಷ್ಟಕ್ಕಾಗಿ ಮಾರಾಟವಾಗಿದೆ. ಕೆಲವು ಪ್ರಶಸ್ತಿ ಪತ್ರಗಳು ಸಂಗ್ರಹದಲ್ಲಿ ಲಭ್ಯ.ಉಡುಪಿಯ ಚಿತ್ರ ಕುಟೀರದ ಕಲಾವಿದರಾದ ಬಿ. ಪಿ. ಬಾಯರಿ ಪಾವಂಜೆಯವರ ಶಿಷ್ಯರು. ಶ್ರೀಬಿ. ಪಿ. ಬಾಯರಿ ಅವರ ಪ್ರಕಾರ "ಸರಸ್ವತಿಯು ಬೆಟ್ಟದ ಮೇಲೆ ಕುಳಿತಿರುವಂತೆ ಭಾರತದ ವಿವಿಧ ಜಾತಿ ವರ್ಗದವರು ವಿದ್ಯಾರ್ಥಿದೇವತೆಯ ಪಾದ ಕಮಲಗಳಿಗೆ ಪುಷ್ಪವನ್ನು ಅರ್ಪಿಸುತ್ತಿರುವಂತಹ ದೃಶ್ಯದ ಜಲವರ್ಣದ ಕಲಾಕೃತಿ ರಚಿಸಿದ್ದರು. ಈ ಕಲಾಕೃತಿಗೆ ಅಖಿಲ ಭಾರತ ಚಿತ್ರಕಲಾ ಸ್ಪರ್ಧೆಯಲ್ಲಿ ಬಹುಮಾನಗಳಿಸಿತ್ತು". ರಾಯರ ಬಗ್ಗೆ ಶ್ರೀ ಬಿ. ಪಿ. ಬಾಯರಿ ಅವರಿಗೆ ಅತೀವ ಗೌರವ. ಈಗಲೂ ರಾಯರ ಕಲಾಕೃತಿಗಳನ್ನು ಮೆಚ್ಚುತ್ತಾರೆ. " ಅಂದು ದಕ್ಷಿಣ ಕನ್ನಡದಲ್ಲಿ ಕೇವಲ ಮೂವರೇ ಕಲಾವಿದರು. ಒಬ್ಬರು ಗೋಪಾಲಷ್ಣ ರಾಯರು , ಮತ್ತೆ ಪುತ್ತೂರಿನ ತೋಲ್ಪಾಡಿತ್ತಾಯ ಹಾಗೂ ಪಡಕೋಣೆ ಶ್ರೀನಿವಾಸರಾಯರು. ಆ ಒಂದು ಕಾಲದಲ್ಲಿ ಗೋಪಾಲಕೃಷ್ಣಯ್ಯ ಅವರು ಕಲಾ ಬೆಳವಣಿಗೆಗಾಗಿ ಮಾಡಿದ ಕಾರ್ಯ ಅವಿಸ್ಮರಣೀಯ. ಅವರು ಬರೀ ಕಲಾವಿದರಾಗಿರಲಿಲ್ಲ. ಸಂಸ್ಕೃತದ ಪಂಡಿತರಾಗಿದ್ದರು. ಗೋಪಾಲಕೃಷ್ಣಯ್ಯ ಮಹಾನ್ ಕಲಾವಿದರು "ಎಂದು ಬಿ.ಪಿ. ಬಾಯರಿ ಅವರು ಅಭಿಪ್ರಾಯ ಪಡುತ್ತಾರೆ.

ನೇರ ಮಾತಿನ ರಾಯರಿಗೆ ಯಾರ ಮೇಲೂ ಸಂಶಯವಿರಲಿಲ್ಲ. ಅನೇಕ ಜನರು ಇವರಿಂದ ಪ್ರದರ್ಶನಕ್ಕಾಗಿ ಕಲಾಕೃತಿ ಪಡೆದು ಪ್ರದರ್ಶನದ ನಂತರ ಕಲಾಕೃತಿಯನ್ನು ಹಿಂದಿರುಗಿಸಿಲ್ಲ. ಸಂದ ಪ್ರಶಸ್ತಿ, ಪದಕ-ಪತ್ರ ರಾಯರ ಕೈ ಸೇರಲಿಲ್ಲ. ಅತೀ ಗಣ್ಯ ವ್ಯಕ್ತಿಗಳೇ ಇವರಿಗೆ ಮೋಸ ಮಾಡಿದ

ಉದಾಹರಣೆಗಳಿವೆ. "ರಾಯರಿಗೆ ಕಲಾಕೃತಿ ಪ್ರದರ್ಶಿಸಿ ರಚಿಸಿದ ನಂತರ ರುಜು ಹಾಕುವ ಸ್ವಭಾವವಿರಲಿಲ್ಲ. ಈ ಅಂಶವನ್ನೇ ಅನೇಕರು ದುರುಪಯೋಗ ಪಡಿಸಿಕೊಂಡರು. ಅನೇಕರು ತಮ್ಮ ಹೆಸರಿನೊಂದಿಗೆ ಕಲಾಕೃತಿ ಪ್ರದರ್ಶಿಸಿ ಬಹುಮಾನಗಳಿಸಿದ್ದುಂಟು" ಎಂದು ವಿವರಿಸುತ್ತಾರೆ - ರಾಯರ ಮೊಮ್ಮಕ್ಕಳು. ಕ್ರಿ. ಶ. ೧೯೪೦ರಲ್ಲಿ ಬೊಂಬಾಯಿಯಲ್ಲಿದ್ದಾಗ ರಾಯರು ಶ್ರೀಮಧ್ವಾಚಾರ್ಯರ ಕಲಾಕೃತಿರಚಿಸಿದ್ದರು. ಅತ್ಯಂತ ಸುಂದರವಾಗಿದ್ದ ಈ ಮಹಾನ್ ಕಲಾಕೃತಿಯನ್ನು ಕದ್ದು , ಅದರಲ್ಲಿ ಕದ್ದವರು ತಮ್ಮ ರುಜು ಮಾಡಿ ಮಾರಿದರು. ಆದರೆ ಈ ಬಗ್ಗೆ ರಾಯರು ಯಾರನ್ನೂ ದೂಷಿಸಲಿಲ್ಲ. ಈ ಬಗ್ಗೆ ಹೆಚ್ಚು ಬೇಸರ ಪಡುತ್ತಿರಲಿಲ್ಲ. ಈ ಪರಿಸರದಲ್ಲಿ ಪರತಂತ್ರ ಜೀವಿಗಳಂತೆ ಈ ವ್ಯಕ್ತಿಗಳು ಮಾನವರಲ್ಲಿನ ಪರತಂತ್ರ ಜೀವಿಗಳು ' ಈ ಬಗ್ಗೆಹೆಚ್ಚಿಗೆ ಚಿಂತಿಸಬಾರದೆಂಬುದು ರಾಯರ ಅನಿಸಿಕೆ. ಈ ಬಗ್ಗೆ ಎಂದೂ ಯಾರನ್ನೂ ರಾಯರು ದ್ವೇಷಿಸಿದವರಲ್ಲ.

ಪಾವಂಜೆ ಗೋಪಾಲಕೃಷ್ಣಯ್ಯ ಅವರಿಗೆ ಕೇವಲ ಹಣ -ಬಹುಮಾನ ಗಳಿಸುವ ಉದ್ದೇಶವಿರಲಿಲ್ಲ. ಎಂದೂ ಈ ಬಗ್ಗೆ ಚಿಂತಿಸಿದ ವ್ಯಕ್ತಿಯೇ ಅಲ್ಲ. ಯಾರ ಮೇಲೂ ಇವರಿಗೆ ಸಂಶಯವಿರಲಿಲ್ಲ. ರಾಯರಿಗೆ ಕಲೋಪಾಸನೆಯೇ ಮುಖ್ಯ ಗುರಿಯಾಗಿತ್ತು.

ಬಹುಮಾನ ಪಡೆದ ಅನೇಕ ಕಲಾಕೃತಿಗಳ ಬಗ್ಗೆ ಮಾಹಿತಿ ಲಭ್ಯವಿಲ್ಲ.ಆಗಿನ ಕಾಲದಲ್ಲಿ ಬಹುಮಾನ ಪಡೆದ ಕಲಾಕೃತಿಗಳು ಕೂಡಲೇ ಮಾರಾಟವಾಗುತ್ತಿತ್ತು.ಅಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದ ಪ್ರಮುಖ ಕಲಾಪ್ರೇಮಿಗಳಾದ ದಿ|ನೆಲ್ಲಿಕಾಯಿ ವೆಂಕಟರಾಯರು , ದಿ|ಧರ್ಮ ಸಾಮ್ರಾಜ್ಯರು , ಹೊಸಬೀಡುವಿನ ದಿ|ಗಮ್ಮಣ್ಣ ಶೆಟ್ಟರು (ಧರ್ಮಸ್ಥಳದ

ದಿ।ಮಂಜಯ್ಯಹೆಗ್ಗಡೆಯವರ ಮಾವ)ದಿ।ಎ. ಬಿ. ಶೆಟ್ಟರು , ಮೈಸೂರಿನ ದಾಸ ಪ್ರಕಾಶ ಹೋಟೇಲಿನ ದಿ। ಕುತ್ತೆತ್ತೂರು ಸೀತಾರಾಮಾಚಾರ್ಯರು ಮುಂತಾದವರು ರಾಯರ ಕಲಾಕೃತಿಗಳನ್ನು ಖರೀದಿಸುತ್ತಿದ್ದರು.

ರಾಯರ ಕಲಾಸಾಧನೆ ಮೆಚ್ಚಿ ಹಲವು ಸಂಘ - ಸಂಸ್ಥೆಗಳು ಸನ್ಮಾನಿಸಿ ಬಿರುದು ನೀಡಿ ಗೌರವಿಸಿದೆ. ಧರ್ಮಸ್ಥಳದ ಧರ್ಮಾಧಿಕಾರಿ ದಿ।ಚಂದಯ್ಯ ಹೆಗ್ಗಡೆಯವರು ರಾಯರ ಕಲಾಸಾಧನೆಯನ್ನು ಮೆಚ್ಚಿ, ಶಾಲು, ಬೆಳ್ಳಿಯ ಹಿಡಿಕೆಯ ದಂಡವನ್ನು ನೀಡಿ ಗೌರವಿಸಿದ್ದಾರೆ. (ಈಗಲೂ ಮಂಗಳೂರಿನ ಪಾವಂಜೆ ಸ್ಟುಡಿಯೋದಲ್ಲಿ ನೋಡಬಹುದು) ಹುಬ್ಬಳ್ಳಿಯ ಸಿದ್ಧಾರೂಢ ಮಠದವರು ಬೆಳ್ಳಿಯ ಚಿತ್ರದ ಚೌಕಟ್ಟು ನೀಡಿ ಗೌರವಿಸಿದ್ದಾರೆ. ಪಾವಂಜೆಯವರ ದೇವರ ಮನೆಯಲ್ಲಿ ಈ ಚೌಕಟ್ಟನ್ನು ಕಾಣಬಹುದು. ಕೆನರಾ ಶಾಲೆಯ ವಿದ್ಯಾರ್ಥಿಗಳು , ಶಿಕ್ಷಕರು , ಹಿರಿಯ ವಿದ್ಯಾರ್ಥಿಗಳು ರಾಯರನ್ನು ಶಾಲು ಹೊದಿಸಿ, ಚಿನ್ನದ ಪದಕದೊಂದಿಗೆ ಸನ್ಮಾನ ಪತ್ರ ನೀಡಿ ಗೌರವಿಸಿದ್ದಾರೆ. ಅದೇ ರೀತಿ ಬೊಂಬಾಯಿ ಜೆ. ಜೆ. ಕಲಾಶಾಲೆಯಲ್ಲಿನ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಂದ ಗೌರವಿಸಲ್ಪಟ್ಟಿದ್ದಾರೆ ರಾಯರು. ಅವರ ಕಲಾಕೃತಿಯಲ್ಲಿ ಒಂದನ್ನು ಅಲ್ಲಿ ಅನಾವರಣ ಗೊಳಿಸಿಲಾಗಿದೆ (ಕ್ರಿ. ಶ. ೧೯೨೦ರ ವೇಳೆಯಲ್ಲಿ). ಕಲ್ಕತ್ತದ ಎನ್. ಬಿ. ಎಸ್. ಸಂಘದವರು ಬಂಗಾರದ ಪದಕದೊಂದಿಗೆ "ಚಿತ್ರಕಲಾನಿಧಿ "ಎಂಬ ಬಿರುದು ನೀಡಿ ಗೌರವಿಸಿದ್ದಾರೆ. "ಚಿತ್ರಕಲಾಚಾರ್ಯ", "ಚಿತ್ರಕಲಾ ಕೋವಿದ "ಎಂಬ ಬಿರುದುಗಳು ಇವರಿಗಿತ್ತು.

ಅನೇಕ ಬಿರುದು , ಸನ್ಮಾನಗಳನ್ನು ಪಡೆದರೂ ಸಹ ರಾಯರಿಗೆ ಹೆಚ್ಚಿಗೆ ಪ್ರಚಾರ ದೊರೆಯಲಿಲ್ಲ. ಪ್ರಚಾರ ಪಡೆಯಬೇಕೆಂಬ ಅಭಿಲಾಷೆ

ಅವರಿಗಿರಲಿಲ್ಲ. ಇದರಿಂದಾಗಿ, ಕಲಾಕ್ಷೇತ್ರಕ್ಕೆ ಅವಿಸ್ಮರಣೀಯ ಅಮೋಘ ಸೇವೆ ಸಲ್ಲಿಸಿದರೂ ಸಹ ಇವರ ಹೆಸರು ಕಲಾ ಇತಿಹಾಸದಲ್ಲಿ ಮೆರೆಯಲಿಲ್ಲ , ಮರೆಯಲ್ಲಿಯೇ ಉಳಿಯಿತು.

ಪಾವಂಜೆ ಗೋಪಾಲಕೃಷ್ಣಯ್ಯ ಅವರು ಕೆನರಾ ಪ್ರೌಢಶಾಲೆಯಲ್ಲಿ ಬೆಳವಣಿಗೆಗಾಗಿ ಅವಿಸ್ಮರಣೀಯವಾಗಿ ದುಡಿದರು. ಆದರೆ ಇಂದು ಕೆನರಾ ಪ್ರೌಢಶಾಲೆ, ಪಾವಂಜೆಯವರ ಹೆಸರು ಮರೆತಂತೆ ಕಾಣುತ್ತದೆ. ಶಾಲೆಯ ಮ್ಯೂಸಿಯಂನಲ್ಲಿರುವ ಪಾವಂಜೆಯವರ ಅಮೋಘ ಕಲಾಕೃತಿಗಳು ಧೂಳಿನಲ್ಲಿ ಅಡಗಿವೆ. ಮಕ್ಕಳ ಜ್ಞಾನಾರ್ಜನೆಯ ಅನುಕೂಲಕ್ಕಾಗಿ ನೀಡಿದ ಅನೇಕ ಪುಸ್ತಕಗಳು , ಹಾಗೂ ಅಪೂರ್ವ ವಸ್ತುಗಳ ಸ್ಥಿತಿಗತಿಯ ಬಗ್ಗೆ ಸರಿಯಾದ ಮಾಹಿತಿಯಿಲ್ಲ. ಪ್ರತಿವರ್ಷ ಏರ್ಪಡಿಸುತ್ತಿದ್ದ ಪಾವಂಜೆ ಗೋಪಾಲಕೃಷ್ಣಯ್ಯ ಸ್ಮಾರಕ ಮಕ್ಕಳ ಚಿತ್ರಕಲಾ ಸ್ಪರ್ದೆ ಸ್ಥಗಿತಗೊಂಡಿದೆ.ಶತಮಾನೋತ್ಸವದ ಸಮಯದಲ್ಲಿ ಅವರ ಹೆಸರು ಕೂಡ ಇಲ್ಲ.

ಅಂತಿಮ ದಿನಗಳು - ಕೊನೆಯಚಿತ್ರ

ಗೋಪಾಲಕೃಷ್ಣಯ್ಯ ಅವರು ವೃದ್ಯಾಪ್ಯದಲ್ಲಿ , ದಿನಕಳೆದಂತೆ ಪಾರಮಾರ್ಥಿಕ ಜೀವನದ ಕಡೆ ಹೆಚ್ಚು ಒಲವು ತೋರಿದಂತೆ ಕಂಡು ಬರುತ್ತದೆ. ಕಲಾಕೃತಿ ರಚಿಸುವ ಕಡೆ ಗಮನ ಕಡಿಮೆಯಾಯಿತು. ದೇವರ ಪೂಜೆ , ಜಪ , ತಪ , ಭಜನೆಯ ಕಡೆಗೆ ಒಲವು ಹೆಚ್ಚಾಯಿತು. ಕೇವಲ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವ ಪದ್ಧತಿ ಮುಂದುವರಿಸಿದರು. ಸಂಜೆ ಸಮಯದಲ್ಲಿ ಮೊಮ್ಮಕ್ಕಳೊಂದಿಗೆ ಸಂಭಾಷಣೆ, ಮಕ್ಕಳಿಗೆ ಆಸಕ್ತಿ

ಹುಟ್ಟಿಸುವ ನೀತಿ ಕಥೆಗಳು, ಆಟದೊಂದಿಗೆ ಪಾಠ ಎಂಬಂತೆ ಸರಳವಾಗಿ ಅನೇಕ ಸಾಮಾನ್ಯ ವಿಷಯಗಳಲ್ಲಿ ಅರಿವು ಮೂಡಿಸಲು ಪ್ರಯತ್ನಿಸುತ್ತಿದ್ದರು. ಈಗಲೂ ರಾಯರ ಮೊಮ್ಮಕ್ಕಳು ಅನೇಕ ಸ್ವಾರಸ್ಯಕರ ಘಟನೆ , ಮಾತುಗಳನ್ನು ಮೆಲುಕು ಹಾಕುವುದುಂಟು. ದೇವರ ಆರಾಧನೆಯ ಕಡೆ ಹೆಚ್ಚು ಸಮಯ ಮೀಸಲಿಡುತ್ತಿದ್ದರು. ವಿಷ್ಣು ಸಹಸ್ರನಾಮ, ಗಾಯತ್ರಿ ಮಂತ್ರದ ಜಪ -ತಪ ಗಳಲ್ಲಿ ಹೆಚ್ಚಿನ ನೆಮ್ಮದಿ ಪಡೆಯುತ್ತಿದ್ದರು.


ಶ್ರೀ ಪಾವಂಜೆ ಗೋಪಾಲಕೃಷ್ಣಯ್ಯ ಅವರು ಬಿದ್ದ ಪರಿಣಾಮವಾಗಿ ಕಾಲಿನ ನೋವಿನಿಂದ ಹಾಸಿಗೆ ಹಿಡಿಯಬೇಕಾಯಿತು. ಹೆಚ್ಚಿನ ಸಮಯ ಹಾಸಿಗೆಯಲ್ಲಿಯೇ ಕಳೆಯುತ್ತಿದ್ದರು. ಅಂತಹ ಪರಿಸ್ಥಿತಿಯಲ್ಲಿಯೂ ಸಹ ಸಲಹೆ ಮಾರ್ಗದರ್ಶನ ಪಡೆಯಲು ಬರುತ್ತಿದ್ದ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವುದನ್ನು ನಿಲ್ಲಿಸಲಿಲ್ಲ. ಕಲಾವಿದರಾದ ಶ್ರಿ ಬಿ.ಪಿ. ಬಾಯರಿಯವರು ಆಗಾಗ ಪಾವಂಜೆಯವರಲ್ಲಿಗೆ ಭೇಟಿಯಾಗಲು ಹೋಗುತ್ತಿದ್ದರು. "ಪಾವಂಜೆಯವರಿಗೆ ವಿದ್ಯಾರ್ಥಿಯಲ್ಲಿರುತ್ತಿದ್ದ ಅಪೇಕ್ಷೆಗಿಂತಲೂ , ವಿದ್ಯಾದಾನ ಮಾಡಲು ಹೆಚ್ಚಿನ ಪ್ರೀತಿ ವಾತ್ಸಲ್ಯ ಅವರಿಗಿತ್ತು, ಕೈ ಬೆರಳು ತೋರಿಸಿ ಮನದಟ್ಟಾಗುವಂತೆ ವಿವರಿಸಿಹೇಳುತ್ತಿದ್ದರು "- ಹೀಗೆ ತಾವು ಅತಿ ಹತ್ತಿರದಿಂದ ಕಂಡ ಪಾವಂಜೆಯವರ ಬಗ್ಗೆ ಬಾಯರಿಯವರು ವಿವರಿಸುತ್ತಾರೆ. ಹಾಸಿಗೆಯ ಸಮೀಪದ ಗೋಡೆಯ ಮೇಲೆ ಪೆನ್ಸಿಲಿನಿಂದ ಸೂರ್ಯಾಸ್ತಮಾನದ ರೇಖಾ ಚಿತ್ರ ಕಂಡ ನೆನಪಾಗುತ್ತದೆ. ಪಶ್ಚಿಮದ ಕಡಲ ತೀರ, ಸಮುದ್ರಗಳಲ್ಲಿ ತೆರೆ, ಹಾಗೆಯೇ ಬಿದ್ದ ತೆಂಗಿನ ಹೆಡೆ ದೂರದಲ್ಲಿ ಸೂರ್ಯ ಮುಳುಗುತ್ತಿರುವ ದೃಶ್ಯ". ಆ ಚಿತ್ರವು ಶ್ರೇಷ್ಠ ಮನುಷ್ಯನೊಬ್ಬನ ಅಸ್ತಮಾನವನ್ನು

ನೆನಪಿಸುವಂತಿತ್ತು "ಹೀಗೆ ಶ್ರೀ ಬಿ.ಪಿ. ಬಾಯರಿ ತಾವು ಅಂತಿಮ ದಿನಗಳಲ್ಲಿ ಪಾವಂಜೆ ಗೋಪಾಕೃಷ್ಣಯ್ಯ ಅವರನ್ನು ಕಂಡ ದೃಶ್ಯವನ್ನು ವಿವರಿಸುತ್ತಾರೆ.

ಗೋಪಾಲಕೃಷ್ಣಯ್ಯ ಅವರು ಗಾಯತ್ರಿ ಮಂತ್ರ ಹಾಗೂ ವಿಷ್ಣು ಸಹಸ್ರ ನಾಮವನ್ನು ಯಾವಾಗಲೂ ಜಪಿಸುತ್ತಲೇ ಇರುತ್ತಿದ್ದರು. ನಿಧನರಾಗುವ ಕೆಲವು ದಿನಗಳ ಮುಂಚೆ ಒತ್ತಾಯಪೂರ್ವಕವಾಗಿ ಮನೆಯ ಅಂಗಳದಲ್ಲಿದ್ದ ತುಳಸಿ ಕಟ್ಟೆಯ ಎದುರಿನ ಗೋಡೆಯ ಬಳಿಹೋಗಿ ಕಷ್ಟಪಟ್ಟು ನಿಂತು ಅಂಗರಕ ಕಡ್ಡಿಯ ಸಹಾಯದಿಂದ ಗೋಡೆಯ ಮೇಲೆ ಚಿತ್ರ ಬಿಡಿಸುತ್ತಾ "ನಾನು ಕಂಡ ದೇವರು ಹೀಗಿದ್ದಾನೆ, ಬನ್ನಿ ನನ್ನ ಮಕ್ಕಳೆಲ್ಲಾ ಬನ್ನಿ, ನಾ ಕಂಡ ದೇವರನ್ನು ನೋಡಿ". ಎಂದು ಉದ್ಗರಿಸಿದ್ದರಂತೆ. ಅಂದು ಅವರು ಚಿತ್ರಿಸಿದ ರೇಖಾಚಿತ್ರ ಶ್ರೀಸೂರ್ಯನಾರಾಯಣ ದೇವರ ಚಿತ್ರ. ಕೊನೆಯ ದಿನಗಳಲ್ಲಿನ ಅವರ ಕಲಾ ಕೌಶಲ್ಯವನ್ನು (ರೇಖಾ ಚಿತ್ರ ರಚನಾ ಜ್ಞಾನ) ಪ್ರತಿಬಿಂಬಿಸುವಂತಹ ಆ ಚಿತ್ರ ರಚಿಸಿದ ಮೂರು ದಿನಗಳ ನಂತರ ಎತ್ತರ ಧ್ವನಿಯಲ್ಲಿ ಮಂತ್ರಗಳನ್ನು ಜಪಿಸುತ್ತಲೇ (ಕ್ರಿ.ಶ. ೧೯೪೫) ದೈವಾಧೀನರಾದರು.

೮೦ ವರ್ಷಗಳ ಕಾಲ ಬಾಳಿ ಬೆಳಗಿದ ರಾಯರು , ರಚಿಸಿದ ಕಲಾಕೃತಿಗಳ ಸಂಖ್ಯೆ ಅಸಂಖ್ಯಾತ. ಅದರಲ್ಲಿ ಅಳಿದುಳಿದ ಕಲಾಕೃತಿಗಳು ಅತ್ಯಲ್ಪ. ದಿ| ಗೋಪಾಲಕೃಷ್ಣಯ್ಯನವರ ಕಲಾಕೃತಿಗಳನ್ನು ರಕ್ಷಿಸಬೇಕೆಂಬ ಹಂಬಲ ರಾಯರ ಮೊಮ್ಮಕ್ಕಳಲ್ಲಿದೆ. ನೂರು ವರ್ಷ ಹಿಂದಿನ ರಾಯರ ದಿನಚರಿ, ಪತ್ರಗಳು, ದೊರೆತ ಪ್ರಶಸ್ತಿ ಪತ್ರಗಳು, ಅಭ್ಯಾಸ ಪುಸ್ತಕಗಳು, ಸಂಗ್ರಹಿಸಿದ ಅನೇಕ ಪತ್ರಿಕೆಗಳು ಹಾಗೂ ಪುಸ್ತಕಗಳು, ರೇಖಾಚಿತ್ರ, ಜಲವರ್ಣ ಹಾಗೂ ತೈಲ ವರ್ಣದ ಕಲಾಕೃತಿಗಳು ಇತ್ಯಾದಿ ವಸ್ತುಗಳನ್ನು ಸಂಗ್ರಹಿಸಿ

ಸುರಕ್ಷಿತವಾಗಿ ರಕ್ಷಿಸಿದ್ದಾರೆ. 'ಕಲಾವಿದ ಶಾಶ್ವತನಲ್ಲ, ಆದರೆ ಕಲಾ ಕೃತಿಗಳು ಶಾಶ್ವತ' ಎಂಬಂತೆ. ಇಂದು ಇವೆಲ್ಲವೂ ಕಲಾವಿದ ದಿ|| ಗೋಪಾಲಕೃಷ್ಣಯ್ಯನವರ ಸಾಧನೆ, ಕಲಾಕೌಶಲ್ಯ ಹಾಗೂ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿವೆ.




ಶಂಕರಾಚಾರ್ಯರು ಮತ್ತು ಶಿಷ್ಯರು



ಶಂಕರಾಚಾರ್ಯರು ಶಿಷ್ಯರೊಂದಿಗಿರುವುದು

SHANKARACHARYA WITH DISCIPLES


